Vidhya

NOTE BOOK

From the Makers of

M.B.S.I

BAFNA GOLD

Name సత్యనారాయణ శాస్త్రి

Class

Subject దేవర కాడు (1)

School

M.B.S.I. BANGALORE - 53

ಶ್ರೀ

ದೇವರ ಹಾಡು.

(ಪುಸ್ತಕ ಒಂದು)

ಗೀತೆ

ಆಮುಖ

12..96 ರಣಾಂಗಣದಲ್ಲಿ ಅರ್ಜುನನಿಗೆ (ಸಂಶಯ)
ದ್ವಂದ್ವ ಗಳುಂಟಾಗಿ ಭಯ ಆಗು ಚಿಂತೆ
ಗಳು ಮಾಡಿದವು. ಆಗಾಗಿದ್ದೇ ಸರಿ.
ಒಬ್ಬನಿಗೆ ಸಾಯಲಿಕ್ಕೆ ಬಂದಾಗ ಆ ಭೀತಿಗಳು
ಬಂದರೆ ಅವು ಸ್ವಾರ್ಥದ್ವಾರ ಬರುವುದು.
ಅರ್ಜುನನಿಗೆ ಸಾಯುವ ಅಂಜಿಕೆಯೇನೂ
ಇಲ್ಲ. ತಾನು ಸತ್ತೇನು, ಆದರೆ ಅಯುಕ್ತ
ಮಾಡದ್ದನ್ನು ಮಾಡೆನು ಎಂದ ಅರ್ಜುನನ
ಮರಣೋತ್ತನ್ನನ ಭೀತಿಯಲ್ಲಿ ಪಶ್ಚಾತ್ತಾಪ
ಗಳಿರುತ್ತವೆ. ಆದರೆ ಅರ್ಜುನನಲ್ಲಿ
ಪಶ್ಚಾತ್ತಾಪವೇನೂ ಇಲ್ಲ. ಈ ಯುದ್ಧದಲ್ಲಿ
ಸೋತು / ಸತ್ತು ಬಿಡುವೆನೇನೋ ಎಂಬ ಆತಂಕವು ಇಲ್ಲ
ಇದೇ ಅರ್ಜುನನಿಗೆ ಬಂದ ಪಕ್ಷ
ಬೇರೆ ಸಮಯದಲ್ಲಿ ಯುಕ್ತಾಯುಕ್ತತೆಯ
ತತ್ವ ಜಿಜ್ಞಾಸೆ ಬಂದಿದ್ದರೂ ಅದಕ್ಕೆ
ಈಗಿನ Seriousness ಇರುತ್ತಿರಲಿಲ್ಲ

ಈಗ ನೋಡಿರಿ, ಅರ್ಜುನನನ್ನು
ನಿರ್ಣಯಕ್ಕಾಗಿ, ಸ್ವತಃ ಈಗಲೇ, ಆತ್ಯಂತಿಕ
ವಾಗಿ ಯಾವುದಾದರೊಂದು (ಎರಡರಲ್ಲಿ
ಒಂದು!) ತೀರ್ಮಾನವನ್ನು ತೆಗೆದು
ಕೊಳ್ಳಲೇ ಬೇಕಾದ ಜರೂರು ಒದಗಿದೆ.

Now or never, do or die,
hit out or get out,
to fight or to relinquish
ಎಂಬಲ್ಲಿ ತುಮುಲದಲ್ಲಿ ಸಿಲುಕಿದೆ,
ಅವನ ಚಿತ್ತವೆಲ್ಲವೂ ಪ್ರಕ್ಷುಬ್ಧವಾಗಲು
ಕಾರಣವಾಗಿದೆ.
ಇನ್ನೊಂದು ವಿಷಯ:
ಅರ್ಜುನನಂತಹ ಪರಮ ವೀರನು
ಕಂಗೆಟ್ಟಾಗ, ಅವನ ಬಳಿಯಲ್ಲಿ
ಯೋಗೀಶ್ವರನಿದ್ದುದು ಸರಿಯಾಯಿತು.

ಅನ್ಯಥಾ ಈ ಗಂಭೀರ ಸನ್ನಿವೇಶವು
ಹಾಸ್ಯಾಸ್ಪದವಾಗಿ ಪರಿಣಮಿಸಬಹು-
-ದಾಗಿತ್ತು.

ನಿಶ್ಚಯ ಜ್ಞಾನವಿಲ್ಲದವನಾಗಿ ಅರ್ಜುನನು
ಈಗ ವಿಹ್ವಲನಾಗಿದ್ದಾನೆ, ಸಂತಪ್ತನಾಗಿದ್ದಾನೆ,
ಬದಲಾಗಿಬಿಟ್ಟಿದ್ದಾನೆ.
ತನ್ನ ಬಳ್ಳಿಯವರೆಲ್ಲ ಈಗ ಎದುರಿದ್ದವರು
ಅವರನ್ನು ಮಾರ್ಗದರ್ಶನಕ್ಕಾಗಿ
ಬೇಡಬಲ್ಲಂತಹ ಆರ್ತನಾಗಿಬಿಟ್ಟಿದ್ದಾನೆ.
ಹೀಗೆ ಶಾಸ್ತ್ರನಾಯಕನು ~~ಈಗ~~ ಕಂಗೆಟ್ಟ ಪ್ರತ್ಯೇಕವಾಗಿ
ವಿರಂಚಿತಜನ್ಯವನ್ನು ಮೊಳಗಿಸಬಲ್ಲವ
ನೇ ಈಗ ಸಂಘರ್ಷದಿಗಳಲ್ಲಿ
ಸಂರಕ್ಷಕನಾಗಬಲ್ಲನು.
ಬಗೆಬಗೆಯ ಮನೋವಿಕಾರಗಳ ರಹಸ್ಯ ಬಲ್ಲ
ಆ ಮಹಾನಾಯನಿಗೆ ತಕ್ಕ ಅರ್ಜುನನ
ರೋಗದ ಚಿತ್ರಣವಾಯಿತು –
ಭಾವನಿಗೆ ಈಗ ಬಡಿದಿರುವ ಭೀತಿಯು
ಮನೋರ್ತಿಯು, ದೌರ್ಬಲ್ಯದ, ಪರವಶತೆಯ
ಫಲ ಎಂಬುದಾಗಿ.

ಪ್ರಶ್ನೆ

ಬಿಬಾರೆ ಯೋಗರು ^(ಅತ್ಯಂತ) ಅಜ್ಞಾನಗಳು ಅರ್ಜುನನನ್ನು ಕಾಡಿವೆ, —

1. ಎದುರಾಳಿಗಳ ಪೈಕಿ ಕೆಲವರು ತನ್ನ ಶತ್ರುಗಳು; ಆದರೆ ಅವರ ಪೈಕಿ ತನ್ನ ಬಂಧುಗಳೂ ಸೇರಿ ಬಿಟ್ಟಿದ್ದಾರೆ. ಅವರನ್ನು ತಾನು ಕೊಲ್ಲುವುದು ಹೇಗೆ ಯುಕ್ತ? ಎಂಬ ಸಂದೇಹ.

2. ಮಿತ್ರರುಗಳು ಬಣದಲ್ಲಿರುವ ಬಂಧು ಸ್ನೇಹಿತರನ್ನು ತಾನೇ ಕೊಲ್ಲಬೇಕಾಗಿದೆ; ಆ ಸಾಮರ್ಥ್ಯವೇನೋ ತನಗೆ ಇದೆ, ಆದರೆ ಆ ಕೃತ್ಯವು ಅನುಚಿತವಾದದ್ದು. ಬಂಧುಗಳ ಹತ್ಯೆಯು ~~ಅನುಚಿತವಾದದ್ದು~~. ಅಂದೆಯಾಗು...ರುವ ದುಃಖಕ್ಕೆ ಅರ್ಜುನನು ಬಲಿಯಾಗಿದ್ದಾನೆ.

3. ಬಂಧುಗಳನ್ನು ಕೊಲ್ಲುವ ಪಾತಕವು ಪಾಪ ಉಂಟಾಗುವುದು? ಅಂತಹ ಕೃತ್ಯವು ಎಂದಿಗೂ ಆದರ್ಶಪ್ರಾಯವಲ್ಲ. ...ಸ್ಥಾನ್ಯೆದು, ಪಾಪ ಉಂಟಾಗುವುದೆಂಬ ಭಯ

ಉತ್ತರ

ಅರ್ಜುನನಿಗೆ ಉಪದೇಶಿಸಿದ ಎಂಟು ಬಗೆಯ
ಜ್ಞಾನ ನಕ್ಷತ್ರಗಳನ್ನು ಪಿಂಡಿಕರಿಸು ಶ್ರೀಕೃಷ್ಣನು
ಪ್ರತಿಪಾದಿಸಿದ ಎಂಟು ಜ್ಞಾನ ನಕ್ಷತ್ರಗಳು

1. ಜಗತ್ತಿನಲ್ಲಿರುವ ಕೆಲವರು ತನ್ನವರು
ಇತರರು ಬೇರೆಯವರು / ಶತ್ರುಗಳು
7, 18, ಎಂಬ ಭಿನ್ನಜನತೆ ಅಜ್ಞಾನದಿಂದಾದದ್ದು
ಭ್ರಾಮಕವಾದದ್ದು. ಇಂತಹ ಭ್ರಮೆಯನ್ನು ತೊರೆ.

2. ಜಗತ್ತಿನ ವ್ಯವಹಾರದಲ್ಲಿ ದೇಹನಾಶವು
ಅನಿವಾರ್ಯ. ಆತ್ಮವು ಬದಲಾಗುವುದು
1.30 ನಶ್ವರವಾದದ್ದಲ್ಲ. ಆತ್ಮ ಅವಿನಾಶಿ
ಎಂಬ ತತ್ತ್ವ ತಿಳಿ. ದುಃಖಿಸಬೇಡ

3. ಪ್ರಪಂಚದಲ್ಲಿ ಎಲ್ಲ ಕೆಲಸಗಳ ಮಾತ್ರವಲ್ಲ
ಕಾರ್ಯವು ದುಷ್ಕೃತ್ಯವೆನಿಸುವುದು.
ಬೇರೊಬ್ಬರ ಪ್ರೀತಿಯ ಅವಸಾನದಲ್ಲಿ
3.8 ಸ್ವಧರ್ಮವಿರುವ ಮಾತ್ರವಲ್ಲ ಅದು
19
30 ಕ್ರಿಯಾ ಫಲವಾಗಿ ಪರಿಣಾಮಿಸಿ ಎಂದು
20
41 21 ಪ್ರಶ್ನೆ ಎನನ್ನು ನೀಡಲಾಗುತ್ತದೆ.
ಭೀತಿ ಪಡಬೇಡ, ನನಗೆ ...
ಸ್ವಧರ್ಮ ಪಾಲಿಸು




ದೇವರ ಹಾಡು


ಅಧ್ಯಾಯ 1

ಕುರುಕ್ಷೇತ್ರದ ಭಾರೀ ಬಯಲಿನಲ್ಲಿ ಯುದ್ಧ ಸನ್ನದ್ಧ ನಡೆಯುತ್ತಿರುವ ಎರಡು ಸೈನ್ಯಗಳಲ್ಲಿ ಸಂಜಯನಿಂದ ಕೇಳಿ ತಿಳಿದುಕೊಳ್ಳ ಬಯಸಿದ ಧೃತರಾಷ್ಟ್ರನು ತನ್ನ ಮನಸಿನಲ್ಲಿ ಉತ್ಪನ್ನ ಹುಟ್ಟಿಕೊಳ್ಳುತ್ತಿದ್ದ ವಿಕಲ್ಪಗಳನ್ನು ತಿಳಿದುಕೊಳ್ಳಲು, ತನ್ನ ಸಾರಥಿಯಾದ ಸಂಜಯನನ್ನು ಪ್ರಶ್ನಿಸಿದ —
ಧರ್ಮಕ್ಷೇತ್ರವೆನಿಸಿದ ಕುರುಕ್ಷೇತ್ರದಲ್ಲಿ ನನ್ನವರು ಪಾಂಡವರು ಭಾರೀ ಯುದ್ಧೋತ್ಸಾಹದಲ್ಲಿ ತಮ್ಮ ತಮ್ಮ ಸೈನ್ಯವನ್ನು ಜಮಾಯಿಸಿದರಂತೆ ಸಂಜಯಾ, ಅಲ್ಲಿ ಮತ್ತೇನು ಜರುಗಿದೆ, ಬೇಗ ಹೇಳ್ಬಿಡು.

ಧೃತರಾಷ್ಟ್ರನ ಈ ಪ್ರಶ್ನೆಯಿಂದ ಚಕಿತನಾದರೂ ಸಂಜಯ ತಾನು ನೋಡುತ್ತಿರುವ ದೃಶ್ಯವನ್ನು ಬಣ್ಣಿಸತೊಡಗಿದ, —




ಇತ್ತ, ನಿನ್ನ ಮಗ ಸುಯೋಧನನು ತನ್ನ
ರಥ ಸಹಿತ ದ್ರೋಣಾಚಾರ್ಯರ (ರಥದ)
ಬಳಿಗೆ ಬಂದು ಹೇಳುತ್ತಿದ್ದಾನೆ,
"ಗುರುಗಳೇ, ಪಾಂಡವರ ಸೇನೆಯನ್ನು ನೋಡಿರಿ
ನಿಮ್ಮ ಶಿಷ್ಯನೇ ಆದ ದ್ರುಪದ ಪುತ್ರನಿಂದ
ಆ ಸೇನೆ ವ್ಯೂಹಗೊಂಡಿದೆ, ಗಮನಿಸಿರಿ.
ಪ್ರಬಲವಾದ ಸೈನ್ಯದಲ್ಲಿ ಮಹಾ
ಮಹಾರಥಿಕರನ್ನು ಬಳಸಿಕೊಂಡು
ಎದುರಿಸುತ್ತಿದ್ದಾನೆ. ಇವರ ಲಕ್ಷ್ಯ ಯುದ್ಧದಲ್ಲಿಯೂ
ಇನ್ನು ತನ್ನ ಸೇನೆಯ ಮಹಾವೀರರತ್ತ
ಗಮನ ಹರಿಸಿದ್ದಾನೆ. ಇವರ ಪೈಕಿ
ಎಲ್ಲಾ ಮಂದಿ ಮಹಾರಥಿಕರು ಅಂತ
ಇವನ ಲಕ್ಷ್ಯ. ಭೀಷ್ಮರ ನಾಯಕತ್ವ
ದಲ್ಲಿ ದ್ವಾರಾ ತಮ್ಮ ಸೈನ್ಯವು
ಭೀಮನನ್ನು ಮುಂಚೂಣಿಯಲ್ಲಿ ಹೊಂದಿದ
ಪಾಂಡವರ ಸೇನೆಯನ್ನು ಪ್ರಬಲವಾಗಿಲ್ಲ
ಎಂಬ ಅಭಿಪ್ರಾಯ ನೀಡಿದ್ದಾನೆ. ಹೀಗಾಗಿ ಅಂತ್ಯ
ಪ್ರಾಂತ್ಯದ ಭೀಷ್ಮರನ್ನು ರಕ್ಷಿಸಿರಿ ನೋಡಿಕೊಳ್ಳಿ
ಇರಿ ಸದಾ ಕಾಪಾಡಿರಿ ಎಂದು ಹೇಳಿ
ತನ್ನ ರಥವನ್ನು ತಿರುಗಿಸು ಬಲ್ಲೇ



ತಿರುಗಿಸಿ ಪತ್ರಿಕೆಗಳು ಇತ್ತ ಭಿಕ್ಷುಗಳು
ಮುದ್ರಣದ ಸನ್ನಿ ಹಿತಕ್ಕೆ ತಕ್ಕಂತೆ ನಿರ್ಣಾಯಕ
ಸೃಷ್ಟಿ ತಮ್ಮ ಕಂಬ ಪ್ರತಿಭೆಯನ್ನು ತೋರ್ಪಡಿಸಿದರು.

ಭಿಕ್ಷುರು ಪ್ರಕಟಿಸಿದ ಈ ಉತ್ತರಕ್ಕೆ
ತಾವು ಹೊರಡಿಸಿದ್ದಂತೆ ಶ್ರೀರಂಗಪಟ್ಟಣದ
ಭಕ್ತಮಂಡಳಿ ತಮ್ಮ ಬಳಿಯಲ್ಲಿದ್ದ
ಕಂಬ, ಕುರ್ಚಿ, ಸಿಗಾರ ಗಳನ್ನು ಬಳಸಿ
ಬೀದಿ ರಂಗಮಂಟಪದಲ್ಲಿ ಕುಣಿಸತೊಡಗಿದರು-
ವಂತೆ, ಕೇಳುವವರ ಎದೆ ಬಡಿಯುವ
ವಂತೆ ಮಾಡಿಬಿಟ್ಟರು.

ಇದಕ್ಕೆ ಪ್ರತಿಯಾಗಿ ಪಾಂಡವರ ಪಡೆ
ಯನ್ನು ತಾರಕ ಸ್ವರದಲ್ಲಿ ಧ್ವನಿಗೈಯಲು ತು.
ಇಲ್ಲಿ ಪ್ರತಿಯೊಬ್ಬರೂ ಕಂಬ ನಾದಗೈಯುವವರೇ
ಇದ್ದ ಕಾರಣದಿಂದ, ಆನೆಗಳ
ಗರ್ಜನೆಯಿಂದಾದ ಧ್ವನಿ ಆಗಸಕ್ಕೆ ಏರಿ
ದಂತಾಯಿತು. ಮೇಲುಹೊದಿಕೆ ರಕ್ತವರ್ಣದ
ರಥ ಪತಾಕೆಗಳ ಜತೆಗೆ ಆ ಗದ್ದ
ಗಲಾಟೆಯ, ಜಯ ಜಯಕಾರ ಶಂಖ



ಪ್ರಾಣಿಗಳ ತಾರಸ್ವರ ಗಗನವನ್ನೆಲ್ಲ ವ್ಯಾಪಿಸಿ ಬಿಟ್ಟಿತು.

ಇಂತಹ ಯುದ್ಧೋತ್ಸಾಹದ ವಿನೂತನ ಘಟನೆಯಲ್ಲಿ ಪಾಂಡವರ ಪಕ್ಷದ ಮಹಾವೀರನಾದ ಅರ್ಜುನನಿಗೆ ಒಂದು ವಿಶೇಷ ಕುತೂಹಲವು ಮೂಡಿತು. ಅವನು ರಥದಲ್ಲಿ ಮುಂದಕ್ಕೆ ಬಾಗಿ ತನ್ನ ಸಾರಥಿ ಶ್ರೀಕೃಷ್ಣನಿಗೆ ಹೇಳುವಂತೆ ಗಟ್ಟಿಯಾಗಿ ಹೇಳಿದ "ಅಚ್ಯುತ ಎರಡೂ ಸೇನೆಯ ನಡುವೆ ನನ್ನ ರಥವನ್ನು ಕೊಂಡೊಯ್ಯು/ ನಿಲ್ಲಿಸು ಇಲ್ಲಿರುವ ಮಹಾವೀರರನ್ನು ಒಮ್ಮೆ ಕಣ್ತುಂಬ ನೋಡಬೇಕೆನಿಸಿದೆ."


ಅವನು ಹೇಳುವಂತೆಯೇ ಎರಡೂ ಸೇನೆಯ ಮಧ್ಯಭಾಗಕ್ಕೆ ಶ್ರೀಕೃಷ್ಣನು ರಥವನ್ನು ನಡೆಸಿದ ನೆರೆದಿದ್ದವರನ್ನು ನೋಡುವಂತೆ ಸಾತ್ಯಕಿಗೆ ಬಿಟ್ಟಿದ್ದನು.

[illegible]
[illegible]
[illegible]
[illegible]
[illegible]
[illegible]
[illegible]


ಎದುರಾಳುಗಳ ಪಡೆಯನ್ನು ನೋಡುತ್ತ
ಪಾರ್ಥನು ಸ್ತಂಭೀಭೂತನಾದ.
ಅವರೆಲ್ಲ ಇವನಿಗೆ ಪರಿಚಿತರೇ. ಅವರಲ್ಲಿ
ಹಲವರನ್ನು ಅವನು ಜೀವನ ಪರ್ಯಂತ
ಪ್ರೀತಿಸಿದ್ದ. ಅವರಲ್ಲಿ ಎಷ್ಟೋ ಜನ
ಅವನೊಂದಿಗೆ ಕಷ್ಟದಲ್ಲಿ ನೊಂದವರು
ಇದ್ದರು. ಅವರಿಂದ ಅವನಿಗೇನೂ
ದಿಗಿಲಾಗಲಿಲ್ಲ. ಆದರೆ ಅವನಿಗೆ ಪ್ರಿಯ
ರಾದವರು ಆ ದುಷ್ಟರ ಪಾಲಿನಲ್ಲಿ
ನಿಂತುಬಿಟ್ಟಿದ್ದರಿಂದ ಅರ್ಜುನನು
ಚಿಂತಾಕ್ರಾಂತನಾದ.

ತನ್ನ ಪಡೆಯತ್ತ ಅರ್ಜುನನು
ದೃಷ್ಟಿ ಹರಿಸಿದರೆ ಅಲ್ಲಿಯೂ ತನಗೆ
ಆಪ್ತರಾದವರೇ ಇದ್ದರು. ಇನ್ನು
ಯುದ್ಧ ಮಾಡಿದರೆ ಅದು ಸ್ವಜನ –
ಬಾಂಧವರ ನಡುವಣ ರಕ್ತಪಾತ,
ಸ್ವಾಮ್ಯಕ್ಕೆ ಹತ್ಯೆಗಳ ದಾರುಣತೆಗೆ
ಆಸ್ಪದ ನೀಡುತ್ತದೆ.
ಅದು ಅನಿವಾರ್ಯವೇ?

ಇಲ್ಲ, ಈ ಸಾಂಸಾರಿಕ ಜತೆಗಳು
ಅನಿವಾರ್ಯವಲ್ಲ! ಯುದ್ಧದಿಂದ ಕೇಳುವ
" ಕೃಷ್ಣಾ, ಇವರೆಲ್ಲ ನನ್ನ ಮಾನವರಂತೆ
ಪ್ರಾಣ ಕಳೆದು ಕೊಳ್ಳಲು ಯುದ್ಧಕ್ಕೆ
ಸಿದ್ಧ ಹೊರಟಿದ್ದಾರೆ? ಇದನ್ನು ಕಂಡು
ದುಃಖದಿಂದ ನನ್ನ ಶರೀರ ಮೇಲೆ
ಬೆವರುತ್ತಿದೆ; ಗಾಂಡೀವವನ್ನು ಬಿಗಿ
ಯಾಗಿ ಕೈಯಲ್ಲಿ ಹಿಡಿಯಲಾಗುತ್ತಿಲ್ಲ;
ಬೆಂಕಿ ಬಿದ್ದಂತೆ ನನ್ನ ಚರ್ಮವೆಲ್ಲಾ
ಉರಿಯುತ್ತಿದೆ, ತಲೆಯು ಗಿರ್ರನೆ
ತಿರುಗುತ್ತಿದೆ; ಅಶುಭ ಸೂಚಕ
ಶಕುನಗಳು ಕಣ್ಣಿಗೆ
ತೋರುತ್ತಿವೆ. ಕೇಶವ, ಎಲ್ಲ
ಬಂಧುಗಳನ್ನು ಕೊಂದು ನಾನು
ಪಡೆಯುವ ಶ್ರೇಯಸ್ಸು ದೊರೆಯುವುದಾದರೂ
ಏನು? ಈ ~~[illegible]~~ ಸಂಗ್ರಾಮದ
ಯುದ್ಧದ ಕೊನೆಯಲ್ಲಿ ನನಗೆ
ಲಭಿಸಬಹುದಾದ ರಾಜ್ಯದಿಂದಾಗಲೀ
ಸುಖದಿಂದಾಗಲೀ ಏನಾಗಬೇಕಿದೆ?



ಕೇಳಿಸುವ, ಯಾರಿದ್ದಾರೆ ಹುಚ್ಚಾಗಿರಬೇಕೆಂ
ದು, ಆಶ್ಚರ್ಯಗೊಳಿಸಲಾಗುತ್ತಿದೆ ಎನ್ನುವುದಿದೆ-
ಬೇಕೆಂದು ನಾನು ಬಯಸಿದ್ದೇನೆಯೇ
ಓದಿದವನ್ನೇ ಕಂಡುಕೊಳ್ಳುವುದನ್ನು ನಾನು
ಕೇಳಿದ ಕೇಳುವುದಿನಾದರೆ ಈ ಯುದ್ಧ
ವನ್ನು ನಾನೇಕೆ ನೋಡುತ್ತಿದ್ದೇನೆ?
ಹೇಳಿದಂತೆ, ನಾನೇ ಸ್ವತಃ ನನ್ನ
ಈ ಬಂಧುಮಿತ್ರರ ಎಲ್ಲರ ಮಾತ್ರ
ನಾನು ಈ ಯುದ್ಧವನ್ನು ತ್ಯಜಿಸಿ
ಹಾಗೆ ಮಾಡುವುದರಿಂದ ನಾನು ಮಾತ್ರ
ಪಾಪಿಯಾಗುತ್ತೇನೆ, ಯಾಕೆ
ರಾಜ ಕೌರವರಂತವರು ದುರಾಚಾರಿಗಳು
ಆಗಿ ~~[illegible]~~ ಯುದ್ಧಕ್ಕೆ ಸಿದ್ಧ
ರಾಗಿದ್ದಾರೆಂದರೆ ನಾನೇಕೆ
ಯುದ್ಧ ಮಾಡಬೇಕು?
ಇವರನ್ನು ಕೊಂದರೆ ಮಾತ್ರ ನಮಗೆ
ದೊರಕುವುದಾದರೆ ಇಂಥ ಭೂಮಿಯ
ಸಿಂಹಾಸನವೇನು, ಮೂರು ಲೋಕದ
ಒಡೆತನವಾಗಿದ್ದರೂ ಬೇಡ ನನಗೆ
ಬೇಕಿಲ್ಲ



ಕುಲಕ್ಷಯವು ಎಸಗುವ ಮಹಾಪಾಪದ ಕಾರ್ಯ
ಕ್ಕೆ ನಾನು ಹಿಂಜರಿಯುತ್ತೇನೆ. ಬಂಧುಗಳಾಗಿ
ರುವವರನ್ನು ಕೊಲ್ಲುವುದು ಶ್ರೇಯಸ್ಕರ
ವಾದುದು. ಶ್ರೇಯಸ್ಸಿಗೆ ಎಂದಿಗೂ ಕ್ಷೇಮ
ವಲ್ಲ; ಇಲ್ಲದೆ ಕುಲಕ್ಷಯವು
ಕುಲಧರ್ಮಗಳೆಲ್ಲ ನಾಶಕ್ಕೆ, ಕುಲಸ್ತ್ರೀಯರ
ವ್ಯಭಿಚಾರಕ್ಕೆ, ~~ಕೊನೆಗೆ~~ ತತ್ ಫಲವಾಗಿ
ವರ್ಣಸಂಕರಕ್ಕೆ ಕಾರಣವಾಗುತ್ತದೆ.
ಈ ಬಗ್ಗೆ ಸ್ವಲ್ಪವೂ ಯೋಚಿಸದೆ
ಇವರು ಸ್ವಾರ್ಥಪರರಾದವರು. ಇವೆಲ್ಲದರ
ಪರಿಣಾಮ ಘೋರ ನರಕವಲ್ಲವೆ!
ಸುದೈವವಶಾತ್ ನನಗೆ ಯುದ್ಧ ತ
ಪ್ಪಿಸುವುದಕ್ಕೆ ಇಂತಹ ಸಂದರ್ಭ
ಬಂದಿದೆ. ಕೃಷ್ಣ, ನಾನಂತೂ
ಶಸ್ತ್ರಹೀನನಾಗಿದ್ದೇನೆ, ಆ ಕೌರವರು
ನಿರಾಯುಧನಾದ ನನ್ನನ್ನು ಕೊಲೆ
ಮಾಡಿದರೆ ನಾನು ಅತ್ತ
ಹೋಗುವೆನು ಎಂದು ಹೇಳುತ್ತಾ
ಶೋಕದಿಂದ ಅರ್ಜುನ
ಬಿಲ್ಲುಬಾಣಗಳನ್ನು ಬಿಸುಟು, ರಥದ ಹಿಂಭಾಗ

ಅನಿವಾರ್ಯವಿಲ್ಲ. ಈ ಕಾರಣ
ಕುತ್ತಿಗೆ ಸೌನಂತು ಸಿದ್ಧನಾ
ಗಿದ್ದೆನು.
~~ಹೀಗೆನ್ನುತ್ತಾ ರಥದ~~ ಹಿಂಬದಿಯಲ್ಲಿ
ಅಂಬುಧನಸ್ಸನ್ನು ಬಿಸುಟು ಅರ್ಜುನ
ನು ತನ್ನ ರಥದ ಹಿಂಬದಿಯಲ್ಲಿ
ಕುಸಿದು ಕುಳಿತದ್ದನ್ನು ಸಂಜಯ
ನು ಧೃತರಾಷ್ಟ್ರನಿಗೆ ತಿಳಿಸಿದನು.


ಹಾಗೆ ನಿತ್ರಾಣನಾಗಿ ಅರ್ಜುನನು
ಕಣ್ಣೀರು ಸುರಿಯುತ್ತ ಕುಳಿತಿದ್ದನ್ನು
ಕಂಡ ಮಧುಸೂದನನು. ಕನಿಕರ
ದಿಂದ ಅರ್ಜುನನ ಬಳಿಗೆ ಬಂದು
ಅವನಿಗೆ ಸಾಂತ್ವನದ ಮಾತನ್ನು ಹೇಳಿ
ದ್ದನ್ನು ಸಂಜಯನು ಧೃತರಾಷ್ಟ್ರ
ನಿಗೆ ವಿವರಿಸಿದನು.
"ಮಹಾರಾಜ, ಅದೋ ಶ್ರೀಕೃಷ್ಣ
ನು ಅರ್ಜುನನಿಗೆ ಹೇಳುತ್ತಿದ್ದಾನೆ

ಭಗವಂತನ ಮಾತು –

" ಪ್ರಿಯಮಿತ್ರ, ಅರ್ಜುನ, ಕೇಳು ಮತ್ತೊಮ್ಮೆ
ನನ್ನ ಮೇಲಿನ ಪ್ರೀತಿ ನಿನಗೆ ಇಂತಹ
ತೋರಿಕೆಯ ಅಲೌಕಿಕತೆಯ ಬಾಂಧವ್ಯವಿದೆ
ಅಲ್ಲ! ಈ ಕಾಲದ ಅನುಭವವೇ ಬಂದ
ನಿನಗೆ ಅಪಾರ ಜ್ಞಾನವು ಸಂಭವಿಸುವುದು –
ದಲ್ಲಿದೆ ನಿನ್ನ ಸಂಕಲ್ಪವನಾಗಿದೆ.

ಈ ಜಗವು ಮೋಹಿತವಾಗಿದ್ದು ತೋರಿದು
ಅದು ಮಾಯೆ, ಇದು ನಿನಗೆ
ತಿಳಿ ನೀ. ಇದು ನನ್ನೊಳಗಿನ ಕೃಷ್ಣನ
ಬಗೆ ಬಿಟ್ಟು ವಿಶ್ವರೂಪ ದರ್ಶನವು
ನಿಜವಲ್ಲ, ಅಂತ್ಯ, ಎಲ್ಲಾ ಈ
ಅಂತರಂಗದ ಮಾತೇ ನಾನು. "

ಕತ್ತಲಿನ ಗೊಂದಲದಲ್ಲಿ ಅರ್ಜುನನು
ಶ್ರೀಕೃಷ್ಣನಿಗೆ ಮರುನುಡಿದ, –
ಹೇಳ್ ಪ್ರೀತಿಯಿಂದ ಮಾಧವನೇ,
ನನ್ನ ಅರಿವಿನ . ಮತಿ ಅಲ್ಲಿ ಭಕ್ತಿ
ನನ್ನ ನನ್ನನ್ನ ಅಂತರಂಗ ತಿಳಿಸುವಂತೆ



ದ್ರೋಣಾಚಾರ್ಯರನ್ನು ಹೇಗೆ ಗುರುವೇ
ನಾನು ಬಾಣ ಪ್ರಯೋಗ ಮಾಡಿ
ನೋಡಬಹುದು ? ಅವರನ್ನು ಕೊಲ್ಲುವುದರಿಂದ
ನನ್ನ ಮಾರ್ಗ ಬಿಟ್ಟಂತೆ ಧರ್ಮ ಮಾರ್ಗ
ಬಿಟ್ಟು ಬರುವಾಗ ಕೃಷ್ಣ ಬೇಡಿ ಕೊಟ್ಟ
ಕೊರೆದು ಕೊಳ್ಳುವುದು ಬೇಡ.

ಅವರನ್ನು ಕೊಲ್ಲಲು ಹೃದಯವು
ನನಗೆ ಈ ಯುದ್ಧದ ಪರಿಣಾಮ
ವೇನಾದರೂ ಖಾತರಿಯಾಗಿ ತಿಳಿದಿರುವುದೇ
ನು ? ಇಲ್ಲ, ಈ ಯುದ್ಧದಲ್ಲಿ
ಯಾರಿಗೆ ಜಯ ಲಭಿಸುವುದೆಂಬುದು
ನಮಗೇನೂ ಗೊತ್ತಿಲ್ಲ.
ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ
ನನಗೆ ಶ್ರೇಯಸ್ಸು ದೊರಕುವ
ಉಪಾಯವನ್ನು ಹೇಳಬೇಕು.
ಹೀಗೆಂದು, ನಾನಂತೂ ಯುದ್ಧ
ಮಾಡಲಾರೆ "
ಹೀಗೆಂದು ಅರ್ಜುನನು
ಕೃಷ್ಣನ ಕೈಯಲ್ಲಿ ಬಿಟ್ಟ.

ಪು ೬೫ | ನೋಡಿ.

ಅಧ್ಯಾಯ - ೨

ಸ್ವಮಿಂದ ಹೀಗೆ ಚಿಂತಾಜನಕ ಪರಿಸ್ಥಿತಿಯಲ್ಲಿ
[illegible] ಎದುರಿಸನಾಗಿ ~~[illegible]~~
[illegible] ನೀರು ತುಂಬಿದ [illegible]
[illegible] ಶ್ರೀಕೃಷ್ಣನು ಹೇಳಿದನು:

4 ಯಾರನ್ನು ಕುರಿತು ಚಿಂತೆ ಮಾಡಬೇಕಿ
ಲ್ಲವೋ ಅಂತವರ ಬಗ್ಗೆ ಕಳವಳ
ಪಡುತ್ತ ಪಂಡಿತರ ಮಾತುಗಳನ್ನು
ಆಡುತ್ತಿರುವೆಯಲ್ಲ, ಅರ್ಜುನ!

ಮೃತರಾದವರ ಬಗೆಗಾಗಲಿ
ಜೀವಂತವಾಗಿರುವವರ ಬಗೆಗಾಗಲಿ
ಹೀಗೆ ನಿಸ್ಸಂತೆ ಕಳವಳ ಪಡುವರೇನು,
ಬಲ್ಲವರು? ತಿಳುವಳಿಕೆ ಇಲ್ಲದಂತೆ
ನೀನು ದುಃಖಿತನಾದ ಮಾತುಗಳನ್ನು
ಆಡುತ್ತಿರುವಿ.

ನಾನಾಗಲಿ ನೀನಾಗಲಿ ಈ ಇವರೆ
ಲ್ಲರಾಗಲಿ ಇದಕ್ಕೆ ಮುಂಚೆಯೂ
ಇದ್ದವರು, ಮತ್ತು ಮುಂದಿನ

ಕಾಲದಲ್ಲಿಯೂ ಇರುವವರು.
ಅಂದ ಮೇಲೆ ನಿನಗೆ ಚಿಂತೆ ಏತಕ್ಕೆ?

ಹುಟ್ಟಿದ ಪ್ರತಿಯೊಬ್ಬರಿಗೂ ಹೇಗೆ ಬಾಲ್ಯ, ಯೌವನ ಹಾಗೂ ಮುಪ್ಪು ಗಳು ಬರುವುವೋ ಹಾಗೆಯೇ ದೇಹಿಗೂ ಇನ್ನೊಂದು ಜನ್ಮ ಪಡೆಯುವುದರಿಂದ ಬದಲೆಗಳು ಧೀರನು ಮರುಳಾಗುವುದಿಲ್ಲ.
ತಣ್ಣಗಿರುವುದು, ಸುಡುವುದು, ಸುಖ ~~ಜಾಗ~~ ವೆನಿಸುವುದು, ದುಃಖವಾಗುವುದು - ಇವೆಲ್ಲವೂ ತಾತ್ಕಾಲಿಕವಾದವುಗಳೇ, ಆದ್ದರಿಂದ ಅವನ್ನು ಪ್ರಾಜ್ಞ ಮನಸ್ಸಿಗೆ ಹಚ್ಚಿಕೊಳ್ಳಬಾರದು.
ನಿಜವಾಗಿ ತನಗೆ ಸಂಬಂಧಿಸದವರು (ತನಗಿಂತ) ಹೊರಗಿನ ಕೆಲವನ್ನು ತನ್ನದು ಎಂದು ಭಾವಿಸಿದಾಗ ಮಾಡುವ ~~ಕೆ~~ ಮಿಥ್ಯಾ ಮೋಹಗಳನ್ನು ದೂರವಿಡು ಅರ್ಜುನ. ಅಂತಹ ವ್ಯಥೆಗಳು ಯಾರನ್ನು ವಿಚಲಿತಗೊಳಿಸುವುದಿಲ್ಲವೋ ಅಂತಹ ಸಮಸ್ಥಿತಿಯ ಧೀರನೋ

[illegible]
[illegible]
[illegible]

[illegible]
[illegible]
[illegible]
[illegible]

[illegible]
[illegible]

[illegible]

[illegible]
[illegible]
[illegible]

[illegible]
ಮಾತ್ರವೇ ^ ಅಮೃತತ್ವವನ್ನು ಪಡೆಯುವನು.

ನಮ್ಮ ಅನುಭವಕ್ಕೆ ಬರುತ್ತಿರುವ ಈ ಅನಾದಿ
ಜಗತ್ತು ಇದೆಯಲ್ಲ, ಇದರಲ್ಲಿ ಯಾವುದು
ಇದೆಯೋ ಅದು ಎಂದೆಂದಿಗೂ ಇರುತ್ತದೆ
ಹಾಗೂ ಈ ಸೃಷ್ಟಿ ಇಲ್ಲದ ವಸ್ತುವು
ಯಾವಾಗಲೂ ಇಲ್ಲವೇ ಇಲ್ಲ. ಇವುಗಳು
ಸೃಷ್ಟಿ ಸದಾ ಇದ್ದಿರುವುದು, ಅದೇ ಅವಿನಾಶಿ
ತತ್ತ್ವ ಎಂದರಿತುಕೋ. ಅದರಿಂದ ಬಳಿದಲ್ಲಿ
ತೋರಿಕೆಯ ವಸ್ತುಗಳಿಗೆ ಅದೇ ಕಾರಣ
ವಾಗಿದೆ. ಆ ಅವಿನಾಶಿಯನ್ನು ನಾಶಗೊಳಿಸುವುದು
ಯಾರಿಗೂ ಸಾಧ್ಯವಿಲ್ಲ (ಸತ್ಯ). ಪ್ರತಿಯೊಂದು
[illegible] ದೇಹದೊಳಗಿರುವ ಆ ಅವಿನಾಶಿ ತತ್ತ್ವಕ್ಕೆ
~~[illegible]~~ ಆವರಣ ಮಾತ್ರವಾಗಿದೆ.
ನಶ್ವರವಾದ ಈ ಆವರಣಗಳನ್ನು ಬಿಟ್ಟಿಸಲು
ನಿನಗೇಕೆ ಆತಂಕ?
ಯುದ್ಧದಂತಹ ಸಂದರ್ಭದಲ್ಲಾಗಲೀ ಸಾವಿನ
ಸಂಭವದಲ್ಲಾಗಲೀ ಯಾರಾದರೂ ಇದನ್ನು
ಅಂತಕನೆಂದಾಗಲೀ ^ ಸಾಯುತ್ತಿರುವುದೆಂದು
ದಾಗಲೀ ತಿಳಿದರೆ ಅದು ತಪ್ಪು.

[illegible]
[illegible].

[illegible]
[illegible], [illegible]
[illegible]
[illegible], [illegible]
[illegible]

[illegible]
[illegible]
[illegible]
[illegible]
[illegible], [illegible].

ಆಧ್ಯಾತ್ಮ ನೀನು ಕೇಳುವವನೂ ಇಲ್ಲ,
ಇವರು ನೋಡುವವರೂ ಇಲ್ಲ.

ಏಕೆಂದರೆ ನಿನ್ನೊಳಗಿನ ಸತ್ಯವು
ಯಾವುದೇ ಬಿಂದು ವಿನ ಪ್ರಾರಂಭದಲ್ಲಿ,
ಯಾವತ್ತೂ ನೋಡುವುದೂ ಇಲ್ಲ. ಒಂದು
ಜೀವಿಯು ಸತ್ತಾಗ, ಆ ಜೀವಿಯೊಳಗೆ
ಹುದುಗಿರುವ ಆ ಸತ್ಯವು ಮಾತ್ರ ಹಾನಿ
ಗೊಳ್ಳದೇ ಉಳಿಯುತ್ತದೆ ಏಕೆಂದರೆ
ಅದಕ್ಕೆ ಹುಟ್ಟು ಇಲ್ಲ, ಸಾವು ಇಲ್ಲ;
ಅದು ಎಂದೆಂದಿಗೂ ಇರುವ ಸತ್ಯವಾಗಿದೆ.
~~ಅದು~~ ತಿಳುವಳಿಕೆಯನ್ನು ಯಾವನು ಪಡೆದು
ಬಿಡುತ್ತಾನೆಯೋ ಅವನು ಉದ್ದೇಶ ಪಟ್ಟು
ಯಾರನ್ನು ತಾನೇ ನೋಯಿಸಬಲ್ಲನು?
(ಸಾವು) ಯಾವ ಘಟನೆಯನ್ನು ಸಾಮಾನ್ಯ
ರು ~~ಸಾವು~~ ವ್ಯಕ್ತಿಯೊಬ್ಬನ | ದೇಹ
ಅಳಿದರೆ ಸಾವು ಎಂದು ಕರೆಯುತ್ತಾ
ತಿಳಿದಿದ್ದಾರೆಯೋ ಅದು ~~[illegible]~~
ಸ್ವಾಭಾವಿಕವಾಗಿ ಉಡುಪು ಬದಲಿಸುವ
ಮಾದರಿಯ ಪ್ರಕ್ರಿಯೆಯಾಗಿದೆ.

ಹುಟ್ಟಿಯಾದಾಗ, ಹುಡುಗ ಇಲ್ಲವೇ ತುಂಬ
ಹಿಟ್ಟಿಯಾದ ದೇಹವನ್ನು ನಾವು -
ನಾವಾಗಿಯೇ - ಕಿತ್ತು ಬಿಸುಟು
ಹರಿದ ಬಟ್ಟೆ ~~[illegible]~~, ಬೇರೆ
ಒಳ್ಳೆಯ ದೇಹವನ್ನು ತೊಡುವುದಿಲ್ಲ
ಇಲ್ಲವೇ? ಹಾಗೆಯೇ ಒಳ್ಳೆಯ
ಬಟ್ಟೆಗಳಂತೆಯೇ ನಮ್ಮೊಳಗಿನ
ನಿರಂತರ ತತ್ವವು ~~ಶ~~ ಶರೀರವನ್ನು
ತನಗೆ ಇಷ್ಟ ಬಂದಾಗ ತೊರೆದು ಬೇರೆ
ಶರೀರಕ್ಕೆ ಪ್ರವೇಶ ಮಾಡುವುದನ್ನು
ನಾವು, ನಾವೆಲ್ಲ ಪರಿಭಾಷೆಯಲ್ಲಿ
ಸಾವು, ಹುಟ್ಟು ಎನ್ನುತ್ತೇವೆ.

ತನಗೆ ಇಷ್ಟ ಬಂದಂತೆ ಶರೀರಗಳನ್ನು
ಬದಲಾಯಿಸುವ ಆ ತತ್ವಕ್ಕೆ ಯಾವುದೆ
ರೀತಿಯ ಯಾವ ಬಂಧನವೂ ಇಲ್ಲ.
ಬೆಂಕಿಯಿಂದ ಸುಡುವುದಕ್ಕಾಗಲೀ ಆಯುಧ
ಗಳಿಂದ ಚುಚ್ಚುವುದಕ್ಕಾಗಲೀ ನೀರಿ-
ನಿಂದ ತೇವಗೊಳಿಸುವುದಕ್ಕಾಗಲೀ
ಗಾಳಿಯು (ಅದನ್ನು) ಒಣಗಿಸುವುದಕ್ಕಾಗಲೀ

[illegible]
[illegible]
[illegible]

[illegible]

[illegible]
[illegible]
[illegible]
[illegible] Been
[illegible]

ಸಾಧ್ಯವಾಗದ, ಅತೀತ ನಿಲುಕಿಯಲ್ಲದ ಈ ಸತ್ಯವು ಸದಾ ಇದ್ದುಕೊಂಡಿದೆ.
ಜ್ಞಾನಿಗಳು ಅದನ್ನು ಅವ್ಯಕ್ತ, ಅಚಿಂತ್ಯ, ಅನಿರ್ವಾಚ್ಯ ಎಂದೆಲ್ಲ ಬಗೆಬಗೆಯಾಗಿ ಕರೆದಿದ್ದಾರೆ. ಅದರ ಸ್ವಭಾವವೇ ಅಂಥ ಇದೆ. ಇದನ್ನು ನೀನು ಅರಿತೆಯಾದರೆ ನಿನಗೆ ಬಂದಿರುವ ದುಃಖವು ಅಡಗುವುದು. ಈ ಉಪಾಯವನ್ನು ನೀನು ಸರಿಯಾಗಿ ತಿಳಿ. (ಅದನ್ನು ಬಲ್ಲ ಬಳಿಕವು ನಿನ್ನ ನೋವಿಗೆ ಯತ್ನ ಉಳಿಸಲಾರದು)
ಅಂದಾಗಲೇ ನೀನೀಗ ದುಃಖ ಪಡುವಂಥದ್ದು ಏನೂ ಇಲ್ಲ ಎಂಬ ಮನವರಿಕೆಯಾಗುವುದು.

ಇನ್ನೊಂದು ರೀತಿ ಚಿಂತಿಸಿದರೆ, ದೇಹ ಪಡೆದಿರುವ ಜೀವವು ಸಾಯುವಂತಹುದು ಎಂದೇ ನೀನಾದರೂ ಭಾವಿಸಿದರೂ ನೀನು ಈ ಸಾಯುವವರನ್ನು ಚಿಂತಿಸ ಬೇಕಿಲ್ಲ. ಏಕೆಂದರೆ

ಪ್ರಶ್ನೆಯ ಪ್ರತಿಯೊಬ್ಬರೂ ಒಂದಲ್ಲೊಂದು ದಿನ
ಸಾಯಲೇ ಬೇಕು. ಪ್ರಕೃತಿಯಲ್ಲಿಗಳಿಗೆ
ಹಲವಾರು ನಿರಂತರ ಕ್ರಿಯೆಗಳಂತೆ
ವ್ಯಕ್ತಿಗಳ ಪ್ರಶ್ನೆ ಸಾವು ಎಂದಾದರೆ
ಉದ್ದೇಶವೇನು ಏನಂತೆ ?
ಒಂದು ಜೀವವು ಹುಟ್ಟಿತೆಂದು ಸಂತಸ
ಪಡಬೇಕೇ, ಒಂದು ಜೀವವು ಅವಸಾನ
ಹೊಂದಿದರೆ ಅಳಬೇಕೇ ? ಹುಟ್ಟಿದವನಿಗೆ
ಸಾವು, ಸತ್ತವನಿಗೆ ಮರು ಹುಟ್ಟು ನಿರಂತರ,
ಕಟ್ಟಿಟ್ಟ ಬುತ್ತಿ; ಇದು ಆಗಲೇ ಬೇಕು.
ಜ್ಞಾನರು ಅಂತಹದನ್ನು ಮನಸ್ಸಿಗೆ
ಹಚ್ಚಿಕೊಂಡು ವ್ಯಥಿತರಾಗಬಾರದು.
ಜೀವಿಯೊಂದರ ಪ್ರಶ್ನೆಗೆ ಮುಂಚಿನ
ಅಥವಾ ಸಾವಿನ ನಂತರದ 'ಇಲ್ಲ'ದ
ಸ್ಥಿತಿಯು ಅವಿನಾಶವಾದದ್ದು; ಅವುಗಳ
ನಡುವಣ ಬದುಕಿನ ಸ್ಥಿತಿಯು
ಅತ್ಯಂತ ಚಿಕ್ಕದು, ಕ್ಷಣಿಕವಾದದ್ದು
ಇದನ್ನರಿತು ನೀನು ಹೇಗೆ ~~ಕೊರಗು~~ ಭಾವಿಸುವುದು
ಎಷ್ಟು ಸರಿ?

ಈ ನಶ್ವರವಾದ ದೇಹದೊಳಗೆ ಸದಾ ಅವ್ಯಕ್ತವಾಗಿ (ಸರ್ವಸಾಕ್ಷಿಯಾಗಿ) ~~ಇದ್ದುಕೊಂಡಿರು~~ ಗುಪ್ತಗೊಂಡು [illegible] ಅದೃಶ್ಯವಾಗಿರುವ ಈ ಅನಂತ ಕಾರಣಕ್ಕಿಂತ ಆಶ್ಚರ್ಯಕರವಾದದ್ದು ಏನಾದರೂ ಇದೆಯೇ, ಅರ್ಜುನ?
ಇದನ್ನು ಕುರಿತು ಯಾರಾದರೂ ನುಡಿದರೆ [illegible] ಆಶ್ಚರ್ಯದ ಸಂಗತಿಯೆಂಬಂತೆ ಉಳಿದವರು ಕೇಳುವರು; ಅನೇಕ [illegible] ಅದು ಯಾರಿಗಾದರೂ ತಿಳಿಯುತ್ತ ಗೋಚರ (ಅರ್ಥ)ವಾದರೂ ಆಶ್ಚರ್ಯದಿಂದನ್ನು ವಿಸ್ಮಯಗೊಂಡಂತೆ [illegible] ಮಹತ್ತ್ವ ~~ಅಂತೆಯೇ~~ ಈ ಆತ್ಮ ವಿಚಾರವು ತಿಳಿಯಲು ಗಹನ (ನಿಗೂಢ)ವಾದುದು.

ಎಂದಿಗಾದರೂ ಬೀಳ್ವಳಿಯುವ ದೇಹ-ದೊಳಗೆ ಇರುವುದೆಂದು ಭಾವಿಸಲಾಗುವ ಆ ಅಮರವಾದ ಆತ್ಮನ ಅವಸಾನವಾದೀತೇ ಎಂದೇನೂ ನೀನು ಆತಂಕ ಪಡಬೇಕಾಗಿಲ್ಲ. ಅದಕ್ಕೆ ಎಂದೂ ಚ್ಯುತಿ ಬಾರದು.

[illegible]

[illegible]

[illegible]

[illegible]

ಆ ಆತ್ಮವು ಎಂತಹ ವಿಚಿತ್ರದ್ದು ಎಂದರೆ ಅದನ್ನು ಹೇಳುವ ಮಾತ್ರದ ವಸ್ತುವು ಇಲ್ಲ. ಅದನ್ನು ತಿಳಿದು ಬಿಟ್ಟರೆ ಎಲ್ಲವನ್ನು ಹೇಳಿದೆ ಎಂಬುದು ಇದೆ. ಆತ್ಮನ ಮಹಿಮೆ ಎಂಬುದು ಇಲ್ಲ. ಅದನ್ನು ಯಾರು ಮಹಿಮೆಯಾರರು ಆತ್ಮ ತಾನೇ ಯಾವಾಗಲೂ ಎಂದೇನು ನೀನು ಚಿಂತಿಸಬೇಕಾಗಿಲ್ಲ.

ಪ್ರಾಣಿಗಳ ಬೆಳವು, ಸಾವು ಎಂಬುದಕ್ಕೆ (ವಿರಹಕ್ಕೆ) ನೀನು ಯಾರನು ಕಾರಣವಲ್ಲ. ಆದ್ದರಿಂದ ನೀನು ತಲೆಕೆಡಿಸಿಕೊಳ್ಳುವಂತೆ ಯಾವು ಇಲ್ಲ. ಏಕೆಂದರೆ ನಿನಗೆ ಧರ್ಮ ಎಂಬುದು ಒಂದು ಇದೆ. ಕ್ಷತ್ರಿಯನಾದ ನಿನಗೆ ಯುದ್ಧಕ್ಕಿಂತ ಶ್ರೇಯಸ್ಕರವಾದ ಬೇರೆ ಉಪಾಯವಿಲ್ಲ. ಅದೃಷ್ಟಶಾಲಿಗಳಾದ ಕ್ಷತ್ರಿಯರಿಗೆ ಮಾತ್ರವೇ ಇಂತಹ ಸದವಕಾಶವು ಒಟ್ಟಿಗೆ ಸುಲಭವಾಗಿ (ತಾನೇ ಬಂದು) ಒದಗುವುದು.

ಇಂತಹ ಧರ್ಮಯುದ್ಧ ನಿನ್ನೆದುರಿಗೆ [illegible]
[illegible] ಕ್ಷತ್ರಿಯೋಚಿತ [illegible] ದಿಂದ [illegible]
ಏನಾದರೂ ಕರ್ತವ್ಯದಿಂದ ಪಲಾಯಿ
ತನಾದರೆ ಜನರು ನಿನ್ನನ್ನು ಕ್ಷಮಿಸರು.
ಮುಖ್ಯವಾಗಿ ನೀನು ಸ್ವಧರ್ಮದ ಉಲ್ಲಂಘನ
ದೋಷದಿಂದಾಗಿ ಪಾಪಿಯಾಗುತ್ತೀಯೆ.
ಅಲ್ಲದೆ ಈಗ ನೀನು ಅಪಕೀರ್ತಿಗೆ
ಗುರಿಯಾಗಿ, ನಿನಗೆ ಮರಣಕ್ಕಿಂತ
ಹೀನವಾದ ದುರ್ಗತಿಯು ಪ್ರಾಪ್ತ
ವಾಗುತ್ತದೆ. ಆಗ ನಿನಗೆ ಬಂದ
ಅಪಕೀರ್ತಿಯು ನಿನ್ನ ಮರಣಾನಂತರವೂ
ಮುಂದುವರೆಯುತ್ತದೆ.
ಒಂದು ವೇಳೆ ನೀನು ಭಯಭೀತಿಯಿಂದ ಈ
ಯುದ್ಧದಿಂದ ಹಿಂತೆಗೆದರು ವೀರರು
ನೀನು ಹೇಡಿತನದಿಂದಾಗಿ ಯುದ್ಧಕ್ಕೆ
ಹೆದರಿದ ಅಂಜುಬುರುಕ ನೆಂದು
ಪರಿಗಣಿಸಿದರೆ ನಿನಗೆ ಮುಂದೇನು
ಗತಿ?
ಅಂದ ಮೇಲೆ ನೀನು ಯುದ್ಧದಿಂದ
ನಿವೃತ್ತನಾಗುವಂತಿಲ್ಲ.

ಯಜ್ಞವನ್ನು ನಿವಾರಣೆ ಮಾಡಿಕೊಳ್ಳುವ
ಬದಲು ನೀನೇ ನಾನಾದರು ಬಿಟ್ಟು ತನಿಂದ
ಫಲಿತನವನ್ನು ತೋರಿದರೆ, ಕೆಟ್ಟದೆಯಿಂದ
ಹೋರಾಡಿದರೆ ಅದರಿಂದ ಸಂಧ್ಯಾನ:
ಪ್ರಶಂಸಾರ್ಹನಾದ ಆ ಮಾಗನದಲ್ಲಿ ಹೋಗುವ
ನೀನು ~~[illegible]~~ ಯಜ್ಞದಲ್ಲಿ ಗೆದ್ದರು
ಸ್ವರ್ಗಪ್ರಾಪ್ತನಾದ ಗೆದ್ದಾಗ ಯು
ನಿನ್ನದಾಗುತ್ತದೆ; ಹಿಂದು ಮತ್ತೆ ಹೋರಾಟ
ದಲ್ಲಿ ನೀನು ~~[illegible]~~ ವೀರೋಚಿತ
ಮರಣವನ್ನು ಹೊಂದಿದರು ಸತ್ತ
ಸ್ವರ್ಗವೇ ನಿನಗೆ ಲಭಿಸುವುದು.
ಹೀಗೂ ನಿನಗೆ ಉಭಯತ್ರ ಇತ್ತಯು
ವಾದ ಲಾಭವೇ ದೊರಕುವುದು. ನೀನು
ಚಿಂತಿಸಬೇಕಾಗಿಯೇ ಇಲ್ಲ.
ವೈರಿಗಳನ್ನು ಪ್ರಹಾರ ಮಾಡಿದ್ದರಿಂದ
~~[illegible]~~ ಬಂದೆ ಗೆದ್ದ ಪಾಪವು ನಿನಗೆ
ಬಂಧಿಸಿತೆಂಬ ಭಯವು ನಿನಗೆ
ಬೇಡ. ಸುಖ ದು:ಖಗಳೆಂಬ ದ್ವಂದ್ವ
ಗಳನ್ನು ಬದಿಗಿರಿಸಿ, ಲಾಭ – ನಷ್ಟ,
ಜಯ – ಪರಾಜಯಗಳನ್ನು ಸಮ

ನೆಂದು ಭಾವಿಸಿ ಹೇಳಿದರು. ಫಲದಲ್ಲಿ
ಆಸಕ್ತಿ ಇಲ್ಲದ ನಿನಗೆ ಈಗ ಇರುವ
ಪರಿಸ್ಥಿತಿ ತಪ್ಪುವುದಿಲ್ಲ.
ಇಂದ್ರಿಯ ಬುದ್ಧಿಯ (ಸಾಂಖ್ಯದ =
ಜ್ಞಾನ ಯೋಗದ) ಬಂಧಗಳನ್ನೆಲ್ಲ ನಾನು
ನಿನಗೆ ತಿಳಿಸುತ್ತಿರುವುದು. ಇದನ್ನೀಗ ಕೇಳು
ಕಾರ್ಯ ಸ್ವರೂಪದಲ್ಲಿ (ಕರ್ಮಯೋಗದಲ್ಲಿ)
ತಿಳಿಯ ಬಯಸುವ ಪ್ರಾಜ್ಞರ್ ಇದನ್ನು ಕೇಳು
ನೀನು, ಕೇಳು.
ಯೋಗದೊಡನೆ ಕರ್ಮವಾಗುವ ಈ
ಬುದ್ಧಿಯಿಂದ ನೀನು ಪ್ರವೃತ್ತನಾದರೆ
ಸಕಲ ಕರ್ಮಬಂಧಗಳಿಂದಲೂ
ಬಿಡುಗಡೆ ಹೊಂದುವೆ.

ಜ್ಞಾನಯೋಗಕ್ಕಿಂತಲೂ ಈ ಕರ್ಮಯೋಗದಲ್ಲಿ
ಹೆಚ್ಚಿನ ವೈಶಿಷ್ಟ್ಯ ಕಲ್ಪಿಸಿದೆ —
ಇಲ್ಲಿ ವಿಹಿತ ಕರ್ಮವನ್ನು ಸಾಧಿಸದಿದ್ದರೂ
ಅದು ಬಿಡುವುದೇ, ತಕ್ಕಷ್ಟು ಫಲವನ್ನು
ನಿಶ್ಚಯವಾಗಿ ನೀಡುತ್ತದೆ; ಇಲ್ಲಿ ಯಾವುದು
ದಕ್ಷ ಪ್ರತಿರಕ್ಷ್ಯವಾದ ಫಲವಿದ್ದು

[illegible]
[illegible]

ಬಾರದು ; ಇಲ್ಲಿಯ ಧರ್ಮಮಾರ್ಗದ ಆಚಾ-
ಆಚಾರ್ಯ ಭಾರತ ಸಂಸ್ಕೃತಿಯನ್ನು ಪರಿ
ಹರಿಸುವಲ್ಲಿ ಬಲಗಾಲಿಯಾಗಿರುತ್ತದೆ
(ಪ್ರತ್ಯಕ್ಷವಾಗಿ ಕಾರ್ಯರೂಪದಲ್ಲಿ ಬೀರದ
ಜ್ಞಾನಮಾರ್ಗದಲ್ಲಿ ಕರ್ಮಮಾರ್ಗದ
ಈ ಬಗೆಯ ಪ್ರಯೋಜನಗಳಿಲ್ಲ)
(ಕೇವಲ ಚಿಂತನೆಗಳನ್ನುಳ್ಳ) ಜ್ಞಾನಮಾರ್ಗ
ದಲ್ಲಿ ವಿಶ್ವ(ಬಾರಿ ಕೆಲ ಹೊಸಗಳು
ವ್ಯರ್ಥವಾಗುವ ಸಂಭವವುಂಟು ;
ಕೇಳ್ವೆಯ ಚಿಂತಿಸಿದುದಕ್ಕೆ ವ್ಯತಿರಿಕ್ತ
ವಾದ ಫಲ ಬರುವ ಸಂಭವ ಇತ್ಯಾದಿ)

ಏನನ್ನಾದರೂ ಕಾರ್ಯತಃ ಮಾಡಬೇಕೆನ್ನ-
ವವರಿಗೆ ಒಂದೇ ಬುದ್ಧಿಯಿರುವುದು
ಆದರೆ ಸಂಭವನೀಯ ಚಿಂತನೆಗಳನ್ನು
ತತಲಾನಿ ಮಾಡುವವರಿಗೆ ಹಲವಾರು ಬುದ್ಧಿಗಳು
ತೋರಬಹುದು.

ಕರ್ಮಶ್ರದ್ಧೆ ಮತ್ತು ರಾಜವರ ಪ್ರೀತಿ
ಗಳಿಸಿಕೊಂಡವರನ್ನು ಪ್ರಥಮತಃ
ಪರಿಗಣಿಸೋಣ. ಭೋಗತ್ಯಾಗವಾದ ಯಾವ
ವೇದಮಂತ್ರಗಳಂತೆಯೂ ಆ ಕರ್ಮಗಳೆಯೂ
ಆದೇಶಗಳಲ್ಲೂ ಈ ಸಾಂಖ್ಯಸ್ಮೃತಿ
ಗಳಿಗೆ ಯಾವಾಗಲೂ ಆಸಕ್ತಿ. ಶ್ರುತಿ
ವಾಕ್ಯಗಳಿಗೆ ಅಂತಹ ವಿಧಿ-ನಿಷೇಧ
ಗಳಲ್ಲಿ ತಾತ್ಪರ್ಯ; ಅಲ್ಲಿ ಹೇಳಲಾಗಿರುವ
ಕರ್ಮಗಳನ್ನು ಬಿಟ್ಟರೆ ಬೇರಾವ
ವಿಷಯವೂ ಇಲ್ಲ ಎಂದು ಈ
ವೇದಕರ್ಮನಿಷ್ಠರಾದ ಪಂಡಿತರು
ವಾದಿಸುತ್ತಾರೆ. ಇವರ ಅಂತಃಕರಣವು
ಸದಾ ಕಾಮನೆಗಳಿಂದ ಕೂಡಿಕೊಂಡಿರು
ವುದರಿಂದಲೂ, ~~[illegible]~~ ಸ್ವರ್ಗಪ್ರಾಪ್ತಿ
ಯುಂತಾದ ಭೋಗಸಂಪತ್ತುಗಳನ್ನು
ದೊರಕಿಸಿಕೊಡುವಂತಹ ವೈದಿಕ
ಕ್ರಿಯೆಗಳನ್ನೇ ಇವರು ಅತಿಶಯ-
ವಾಗಿ ಪರಿಗಣಿಸುವುದರಿಂದಲೂ, ಶ್ರೇಷ್ಠ
ವಾದ ಮುಂದಿನ ಜನ್ಮ ದಾಗಲಿ ಸುಖಾತಿಶಯದ
ಕರ್ಮಫಲಗಳನ್ನೇ ಇವರು ಅತಿ-

ವುಟ್ಟು ಹೆಂಡು ಶ್ರಾವಣ ಪುದಿಂದಲೂ
ಇವರ ಕಾರ್ಯನಿರತ ಬುದ್ಧಿಯು
ಂಬಗ ಸ್ವಯಂ ಪ್ರಭೆಯಿಂದಲೂ ಸರ್ವವನ್ನೂ ಗೆಲ್ಲುವುದು.

ಇಂತಹವರ ಸುಖಾಪೇಕ್ಷೆಯನ್ನು ಈ ದೇಹಕ್ಕೆ
ಕೊಡಲಾಗುವ ವಿಧಿಗಳೆಲ್ಲ
ತ್ರಿಗುಣಾತೀತನಾದ ವಿಷಯಗಳನ್ನು
ಕಲ್ಪನೆಗಳು ನಿರ್ಮೂಲವಾದರು, ಬಂಧನ,
ಮೋಕ್ಷ ಯಾತ್ರೆ ಬಯಕೆಗಳೆಲ್ಲ ನಿಲುಕ-
ಕಲ್ಲದೆ, ತ್ರಿಗುಣಾತೀತನಾದ
(ತ್ರಿಗುಣಾತೀತನಾದ ರಜ ಮೂರು
ಗುಣಗಳಿಂದ ಹೊರತಾದ) ಆತ್ಮನನ್ನು-
ವನೆಲ್ಲ ಗಮನವಿರು. ಇದಕ್ಕಾಗಿ
ಮೋಕ್ಷ ವಿಲ್ಲ ದ್ವಂದ್ವಗಳನ್ನು ಮೀರಿದವ
ನಾಗಿ, ನಿತ್ಯ ವಿಸ್ಮಿಸಲ್ಲ ಸದಾ ನಿಷ್ಠೆ
ನಾಗಿರುವವನಾಗಿ, ಪರಿಕೆಯಾದ ಶಾಶ್ವ
~~[illegible]~~ ಪಾರಲೌಕಿಕವಾದ ಸಿದ್ಧಿ
ಗಳು ಧ್ಯೇಯವನ್ನು ಹೊಂದಿಸ್ಲದೆ,
ಆತ ಜ್ಞಾನಿಯಾಗಿ ಬೆಳಗುತ್ತದೆ.
ಇಂತಹ ಆತ ಜ್ಞಾನಿಯಾಗಿ [illegible]

ಜಾಂಬವಂತರಲ್ಲಿ ಮುಖ್ಯವಾದದ್ದೇನೆಂದರೆ
[illegible] ಸುತ್ತಮುತ್ತಲೂ ನೋಡಿದರೆ ಅವರ
ಕಾಣುವುದೆಲ್ಲ ವಿಭಿನ್ನ ವಸ್ತುಗಳ
ಅಧಿಕಗಳನ್ನು ತಿಳಿದ ಬಾಲಕನಾಗಿ
ಅಲ್ಲಿ ಎಲ್ಲೆಲ್ಲಿ ಪ್ರಾಣಿಜಗತ್ತಿನ
ಕಂಡು ಬರುತ್ತದೆ! (ಆ ಪ್ರಾಣಿಜಗ
ಗಳು ಬಗೆಗಳು ಮಾತ್ರ ಬೇರೆ ಬೇರೆ
ಆಗಿರುವುದರಿಂದ ಅವುಗಳ ಶಕ್ತಿ
ತಾರತಮ್ಯ ಜ್ಞಾನವಿಲ್ಲ ಕೆಲವು ವಿವೇಕಿ
ಮಾಡುವನು. ಸಂಬಂಧದ ದಿವ್ಯ
ಅರಸ ಬೇಕು, ಅದುವೇ ಜ್ಞಾತನ
ಅದುವೇ ಬುದ್ಧಿವಂತಿಕೆಯ ಸಾಧನೆ ಶಕ್ತಿ)

ತತ್ಪಂತರ ಕ್ಷೇತ್ರಗಳನ್ನು ತಂದು ಕೊಡುವಂತ
ಮಾಪದೇಶ ಮಾರ್ಗಗಳನ್ನು ಮಾಡಲು ಹೊರಟಾಗಲೂ
ಒಂದು ವಿವೇಚನೆ ಇರಲಿ; ನೀನು
ಮಾಡುವ / ಮಾಡಿದ ಕರ್ಮದಿಂದ
ನೀನು ಅಪೇಕ್ಷಿಸಿದ ಫಲವೇ ಬರು
ವುದು ಎಂದು ಅವಲಂಬಿಸದಿರು.
ಕರ್ಮ ಫಲಗಳ / ಸಂಬಂಧದ

ವಿಶ್ರಾಂತಿಯ (ಮಾರ್ಗ) ವು ತುಂಬ
ಸಹಜ (ಸಿಗುವ) ವಾದದ್ದು. ಆದ್ದರಿಂದ
ನಿಸ್ವಾರ್ಥ ಸೇವೆ ಒಂದಿದ್ದರಿಂದ
ಎಲ್ಲರೂ ನಿಶ್ಚಿಂತರಾದರೆ
ನಿರಾತಂಕನಾಗಬಹುದು.
ಆದ್ದರಿಂದ ಫಲಾಪೇಕ್ಷೆ ಇಲ್ಲದೆ
ಕರ್ಮ ಮಾಡುವುದನ್ನು ತಿಳಿದು
ಉದಾರ ಬುದ್ಧಿ ಬಂದಿದೆ. ಇದರಿಂದ
ನನ್ನ ಜೀವನದಲ್ಲಿ ಆಗುವ ಎಲ್ಲಾ
ನಿರಾಶೆಗಳು, ದುಃಖಗಳು ತಪ್ಪುತ್ತವೆ.

ಪ್ರತಿಫಲದ ಅಪೇಕ್ಷೆ ಇಲ್ಲದೆ
ಯಾವುದೇ ಕರ್ಮವನ್ನು ಮಾಡುವುದನ್ನು
ಬಿಟ್ಟುಬಿಡಬೇಕು
ಹಾಗೆ ಕರ್ಮ (ಮಾಡುವುದು) ನ್ನು
ತ್ಯಜಿಸಬಾರದು. ಏಕೆಂದರೆ ಕರ್ಮ
ಭ್ರಷ್ಟನಾಗುವುದು ದೋಷಯುಕ್ತ.

ಈಗ ಒಂದು ಪ್ರಶ್ನೆ ಏಳುತ್ತದೆ. —

[illegible]

[illegible]

[illegible]

ಮಾಡುವ ಕೆಲಸದಿಂದ ಲಾಭವನ್ನು
ಅಪೇಕ್ಷಿಸಬಾರದು ಎಂದಾದ ಮೇಲೆ
ಆ ಕೆಲಸವನ್ನು ಮಾಡಲೇ ಬೇಕು
ಎಂಬುದು ಹೇಗೆ ಸಕಾರಣವಾಗುತ್ತದೆ?

ಮೇಲಿನ ಮಾತು ಮಾಡುವದನ್ನೇ
ತಡೆಯಲು ಹೇಳಿದ್ದಲ್ಲ. ಮಾಡುವುದರ
ಲಾಭ/ನಷ್ಟವನ್ನು ಯೋಚಿಸುವುದಕ್ಕಿಂತ
ಮುಖ್ಯವಾಗಿ ಮಾಡುವಾಗ ನಿರಾಶೆ/
ದುಃಖವು ನಮಗಾಗಬಾರದು ಎಂಬ
ಮನಃಸ್ಥಿತಿ/(ಕೆಲಸದ ದೃಷ್ಟಿ)ಯಿಂದ
ಹೇಳಿದ್ದುದು ಇದು.

'ಫಲದ ಸಂಗವಿಲ್ಲದೆ ಕೆಲಸ ನಿರತನಾಗು
ಆಗ ನಿನಗೆ ದುಃಖವು ಬಾಧಿಸುವುದಿಲ್ಲ'
ಎಂಬ ಮಾತನ್ನೇ ಶ್ರೀಕೃಷ್ಣನು
'ಯೋಗಸ್ಥನಾಗಿ ಕೆಲಸಗಳನ್ನು
ಮಾಡು, ಆ ಕೆಲಸಗಳಿಂದ ಬರು
ವ ಯಾವ' ಫಲಾಪೇಕ್ಷೆಯನ್ನು ತ್ಯಜಿಸು
ಎಂದು ಅರ್ಜುನನಿಗೆ ತಿಳಿಸುತ್ತ

ಹೇಳುತ್ತಾನೆ.
ಮನಃಶಾಸ್ತ್ರದ ಆಧಾರವಿಲ್ಲ ಕೆಲಂಶ
ಈ ತತ್ವ ಉದ್ಭವಿಸಿದೆ.

ಮಾಡಿದ ಕೆಲಸದಿಂದೊಂದು ಫಲದೊರೆಯುವುದು
ಅಥವಾ ದೊರೆಯದಿರುವುದು. ಈ ಬಗ್ಗೆ
ನಿರ್ಲಿಪ್ತನಾಗಿರುವ ನಿಯಮ-
ಉತ್ತಮತೆಯನ್ನು ಭಗವದ್ಗೀತೆಯು
'ಅಲಿಪ್ತ' ಎಂಬ ಹೆಸರಿನಿಂದ ಗುರುತಿಸಿ
ಬಣ್ಣಿಸಿದೆ.
(ಅಧ್ಯಾತ್ಮ ಇಲ್ಲಿ ಅನಗತ್ಯ ಎನಿಸುವುದು
ಶರೀರದ ಹೊರಗಿನ ಭಾಗ / ಮನಸ್ಸಿಗೆ
ಸಂಬಂಧವಿಲ್ಲದ್ದು)
ಅದರಿಂದ ಆರೋಗ್ಯಕರವಾದ ಸ್ವಸ್ಥವಾದ ಮನಃಸ್ಥಿತಿ..
ಹಾಗೆ ಬುದ್ಧಿಯಲ್ಲಿ ನಿಶ್ಚಲವಾದ ಸ್ಥಿತಿ
ಯನ್ನು ಸಾಧಿಸುವುದು ಕರ್ಮಯೋಗದನ್ನು
ಮಾಡುವುದಕ್ಕಿಂತಲೂ ಶ್ರೇಷ್ಠವಾದದ್ದು.
ಏಕೆಂದರೆ ಬುದ್ಧಿಯನ್ನು ಸ್ಥಿರವಾಗಿ
ತಾರದೆಯೇ, ಫಲಕ್ಕಾಗಿ ಕರ್ಮವನ್ನು

[illegible]
[illegible]

[illegible]

ಮಾಡುವವರು ಅಜ್ಞಾನಿಗಳಾಗಿ ಸ್ವಾರ್ಥದ
ಏಳನೆಯ ಬಹಳ ಆಡಂಬರದ ಪ್ರತಿಫಲವನ್ನೇ ಬಯಸುವ ಪ್ರ
ವರ್ತನೆಯ ಬುದ್ಧಿ ಹೀಗಿದೆ ಕರ್ಮ ಪ್ರವೃತ್ತಿ
ಸಾಧನೆಯು ಆ ಕಾರ್ಯದ ಒಳಿತು-
ಕೆಡುಕುಗಳ ಸಂಬಂಧವನ್ನು
ತ್ಯಜಿಸುತ್ತೇನೆ. ಆದ್ದರಿಂದ ಕರ್ಮ
ಪ್ರವೃತ್ತಿ ನಾಶವಾದರೂ ನಿಯಮಿತ
ಬುದ್ಧಿಭಾವದ 'ಯೋಗ' ವನ್ನು
ಹೊಂದಬೇಕು. ಅಂತಹ ಯೋಗವೇ
ಪ್ರಮಾದದ ಕರ್ತವ್ಯಗಳಲ್ಲಿ ಒಳ್ಳೆಯ ಕೌಶಲ್ಯವನ್ನು
ಉಂಟುಮಾಡುವುದು ~~ಆದ್ದ~~
~~ಬೇರೆಯದೆ ನಾವು ಮಾಡುವ ಕಾರ್ಯಗಳಲ್ಲಿ ಒಳ್ಳೆ~~
~~ಕೌಶಲ್ಯವನ್ನು ಉಂಟುಮಾಡುವುದು~~

ಅಂತಹ ಬುದ್ಧಿ ವಿವೇಕದೊಂದಿಗೆ ಇರುವ
ಜ್ಞಾನಿಗಳು ಮಾತ್ರ ಕರ್ಮದಿಂದ
ಉದ್ಭವಿಸುವ ಫಲಗಳನ್ನು ತ್ಯಜಿಸಿ
ಜನನ ಮರಣದ ಬಂಧನಗಳಿಂದ
ತಪ್ಪಿಸಿಕೊಂಡು ನೇರವಾಗಿ ದಾರಿ
ಸಾರ್ವಕಾಲಿಕ ಶಾಂತಿಯೆಡೆ ಒಂದು

[illegible]
[illegible]
[illegible]

[illegible]
[illegible]
[illegible]

ಧ್ಯಾನವನ್ನು ಕಲಿಸುವರು.

ನಿನ್ನ ಕಾಲನ ಮೋಹದ ಜನ್ಯವಾದ ಈ ಮಬ್ಬು ಕತ್ತಲೆಯನ್ನು ನೀನೇ ಬುದ್ಧಿಪೂರ್ವಕವಾಗಿ ದಾಟಿ ಹೋಗಬೇಕು. ಅಂದಾಗಲೇ ನೀನು ಎಲ್ಲ ಜ್ಞಾನಗಳೂ ವಿದ್ಯೆಗಳೂ ತಿಳಿಯುವಂತ- -ಸುಖ ನೆಮ್ಮದಿ (ಸಮಾಧಾನ ಸ್ಥಿತಿ) ಯನ್ನು ಪಡೆದುಕೊಳ್ಳುವೆ.
(ಚಿಂತೆಯ ಸ್ವರೂಪವೇ ತಿಳಿಯದವನು.
ಎಷ್ಟೇ ಶಾಸ್ತ್ರಗಳ ಸಾರವ ಓದಿದರೂ ಚಿಂತಾಕ್ರಾಂತನು ತಾನೇ (ಸ್ವತಃ) ತನ್ನ ಚಿಂತೆಯಿಂದ ಹೊರಬರಬೇಕಾಗುತ್ತದೆ).

ಆದ್ದರಿಂದ ಅರ್ಜುನ, ಮುಖ್ಯವಾಗಿ ನೀನು ಈಗ ದೃಢಚಿತ್ತವನ್ನು ತಂದುಕೊಳ್ಳಬೇಕು ವಿಹ್ವಲಗೊಂಡ ನಿನ್ನ ಮನಸ್ಸಿನ ಈ ಚಂಚಲತೆಯನ್ನು ನೀನು ಪ್ರಯತ್ನಪೂರ್ವಕ ಪರಿಹರಿಸಿಕೊಂಡೆಯಾದರೆ ಆ ಬಳಿಕ ಚಿತ್ತೈಕಾಗ್ರತೆಯಿಂದ ನೀನು ಕ್ರಮವಾಗಿ ಸಮಾಧಿಯನ್ನು ಸಾಧಿಸಬಹುದು.

ಶ್ರೀ ಕೃಷ್ಣನ ಇಷ್ಟು ವಿವರಣೆಯಿಂದ ಅರ್ಜುನನಿಗೆ ಕೆಲವು ಪರಮಾರ್ಥ ವಿಚಾರ-ಗಳು ಸ್ಪಷ್ಟವಾಯಿತು. ಈ ವರೆಗೆ ಆತನ ಮಹಾವೀರನನ್ನಾಗಿಸಿದ್ದ, ಅಜ್ಞಾನದ ಈ ಅವಿವೇಕಿತ್ವದ ಸೋಂಕಿಗೆ ಮಾತ್ರವಲ್ಲದೆ ಬಂದಾಗಿ ಪ್ರಾಜ್ಞರಿಗೆ ಮಾತ್ರ ಅರ್ಥವಾಗುವ ಗಹನ ತತ್ವಗಳು ಪಾರ್ಥನ ಗಮನಕ್ಕೆ ಬಂದವು.

ತಾತ್ಪರ್ಯವಾಗಿ ಹೇಳುವುದಾದರೆ, ಶ್ರೀ ಕೃಷ್ಣನ ಮತದಲ್ಲಿ, ಮನುಷ್ಯನಿಗೆ ಪರಮಾರ್ಥ ಪ್ರಾಪ್ತಿಗಾಗಿ ಎರಡು ಉಪಾಯಗಳಿವೆ — ಬುದ್ಧಿ ಪ್ರಾಧಾನ್ಯಕವಾಗಿ ಆತ್ಮಜ್ಞಾನವನ್ನು ಪಡೆಯುವುದು ಜ್ಞಾನಯೋಗ. ೧
ಕರ್ಮಯೋಗ ಎಂಬುದು ಕಾರ್ಯತಃ
೨ ಜೀವನಸಿದ್ಧಿಯನ್ನು ಪಡೆಯುವ ಮಾರ್ಗ.

ಈ ಎರಡು ಮಾರ್ಗದಲ್ಲಿಯೂ ಸಾಧಕನಾದವನು ~~ಮ~~ ತನ್ನ ಮನಸ್ಸನ್ನು ನಿಯಂತ್ರಕ್ಕೆ ತಂದು ಶಾಂತ ಸ್ಥಿತಪ್ರಜ್ಞನಾಗಬೇಕಾಗುತ್ತದೆ.

[illegible]

೨೦೭ [illegible]

~~[illegible]~~

ಈ ಅಂಶವನ್ನು ಮತ್ತೊಮ್ಮೆ ಸ್ಪಷ್ಟ ಮಾಡಿ
ಕೊಳ್ಳಲು ಅರ್ಜುನನು ಶ್ರೀ ಕೃಷ್ಣನನ್ನು
ಪ್ರಶ್ನಿಸಿದ, —
ಸಮತ್ವ ಯೋಗವನ್ನು ಪಡೆದಿರುವ,
ಸ್ಥಿತಪ್ರಜ್ಞ ನೆಂಬುವನು ಹೇಗಿರುತ್ತಾನೆ!
ಸಮಾಧಿಯನ್ನು ಅವನು ಪಡೆದವನಾದ—
ದರಿಂದ ಬಳಿಕ ಯಾವ (ಎಂತಹ)
ಮಾತಾಡುತ್ತಾನೆ, ಅವನೇನು ಆ ಬಳಿಕ
ಕುಳ್ಳಿರುತ್ತಾನೆಯೇ, ನಡೆದಾಡುತ್ತಿರು—
ತ್ತಾನೆಯೇ ?


ತನ್ನ ಮಾತಿನಲ್ಲಿ ಇದ್ದ ಗೂಢತೆಯನ್ನು
ಅರ್ಜುನನು ತಿಳಿದದ್ದರಿಂದ ಶ್ರೀ ಕೃಷ್ಣ
ನಿಗೆ ಸಂತೋಷವಾಯಿತು. ತಾನು
ಹೇಳಿದ್ದುದು ಗಹನವಾದ ಆತ್ಮ ತತ್ತ್ವ
ವಾದರೂ ಅರ್ಜುನನು ಅದನ್ನು
ಅರ್ಥಮಾಡಿಕೊಂಡಿದ್ದಾನೆ ಎಂಬುದು
ಶ್ರೀ ಕೃಷ್ಣನಿಗೆ ಆನಂದದ ವಿಚಾರ.

ಸ್ಥಿತಪ್ರಜ್ಞನು ಹೇಗಿರುತ್ತಾನೆ ಎಂಬ ಪ್ರಶ್ನೆಗೆ ಶ್ರೀ ಕೃಷ್ಣನ ಉತ್ತರ

ಪ್ರತಿಕ್ಷಣವೂ ವಿಷಯಗಳನ್ನು ಪಡೆಯಲು ಹಂಬಲಿಸುವ ಹಾಗೂ ಬಯಸುವ ಸ್ವಭಾವವು ನಮ್ಮ ಮನಸ್ಸಿನ ಸಹಜವಾಗಿ ಇದೆ. ಹಾಗೆ ಮನಸ್ಸಿನಲ್ಲಿ ಉದ್ಭವಿಸುವ ಬಯಕೆಗಳನ್ನು ತ್ಯಜಿಸುವಲ್ಲಿ ಯಾವಾತನು ಯಶಸ್ವಿಯಾಗಿ ಸದಾ ತನ್ನಲ್ಲಿ ತಾನೆಯೇ ತೃಪ್ತಿಯಿಂದಿರುತ್ತಾನೆಯೋ ಅವನೇ ಸ್ಥಿತಪ್ರಜ್ಞನು. ದುಃಖವು ಸಂಭವಿಸಿದ ಸ್ಥಿತಿಯಲ್ಲಿ ಉಳಿದವರಂತೆ ಅವನ ಮನಸ್ಸು ತುಂಬ ಉದ್ವೇಗ / ಹತಾಶ ಆಗುವುದಿಲ್ಲ; ಹಾಗೆಯೇ ಸುಖದ ಸಮಯದಲ್ಲಿ ಸುಖವನ್ನು ಅವನು ಮನಸ್ಸಿಗೆ ಅತಿಯಾಗಿ ಹಚ್ಚಿಕೊಳ್ಳುವುದಿಲ್ಲ. ಹೀಗಾಗಿ ಮಿತಿಯಿಲ್ಲದ ಪ್ರೀತಿ, ಭಯ, ಕ್ರೋಧ, ಆವೇಗಗಳಿಂದ ದೂರವಿರುವ ಅವನ ಮನಸ್ಸು ಸದಾ ಸಮಸ್ಥಿತಿಯಲ್ಲಿ (ಶಾಂತ) ಇರುತ್ತದೆ. ಈ ವೈಶಿಷ್ಟ್ಯದಿಂದಾಗಿ ಅವನು 'ಮುನಿ'

ಎನ್ನಿಸಿಕೊಳ್ಳುತ್ತಾನೆ. ಜೀವನದಲ್ಲಿ
ನಿರಂತರತೆ ಹೊಂದಿರುವ ಸುಖ-ದುಃಖ
ಗಳ ಹೊಳೆಗಳು ಸಮುದ್ರದಲ್ಲಿ ಲೀನ
ಗೊಳ್ಳುತ್ತಿದ್ದರೂ ತಾನೆ ಸಹಜವಾಗಿ
ಅಗಿರುವ ನಿರಂತರವಾಗಿ ಬಂದು -ಹೋಗುವುದು
ಎಂದು ಅವನು ಅರ್ಥಮಾಡಿಕೊಂಡಿದ್ದಾನೆ.
ಯಾವುದರ ಗೊಡವೆಯು ಇಲ್ಲ ಅವನು
ಮನಸ್ಸಿನಗೆ ಹುಟ್ಟಿಕೊಳ್ಳುವ ಸಂದ
ಸುಖವು ಪ್ರಾಪಂಚಿಕವಾಗಿ ಅತಿಯಾಗಿ
ಅನ್ನದೆ, ಅನುಭವ ಸಂಭವಿಸಿದಾಗ
ಮಿತಿಯಾರಿ ವಿಧೇಯನಂದದ ತನ್ನ
ಪ್ರಜ್ಞೆ (ಕ್ಷೇತ್ರ ಪ್ರಾರ್ಥ ಜ್ಞಾನ) ಯನ್ನು
ಸ್ಥಿರವಾಗಿ ಕಾಪಾಡಿಕೊಂಡಿರುತ್ತಾನೆ.
ಇದು ಅವನೇ ತಾನಾಗಿ ರೂಢಿಸಿಕೊಂಡ
ಸ್ವಭಾವ.

ಅವನಿಗೆ ಒಂದು ಸ್ವಭಾವವಿದೆ. ಅಕಸ್ಮಾತ್
ಯಾವುದಾದರೂ ಪರಿಣಾಮ ವಸ್ತುವು
ಅವನೆಯನ್ನು ಸಮಾಧಿಸಿ, ~~ಅವರ~~ ಹೊರ
ಬರಬರುವ ಅದರ ಕಾಲುಗಳನ್ನು
ಸ್ವಾಗತಿಸಿ ಮೊದಲನೆಯದು ಶ್ರೀಮಂತ



ತಕ್ಷಣ ಜಾಗೃತಿಯಿಂದ ತನ್ನ ಅಂಗಾಂಗ
ಗಳನ್ನು ~~ತನ್ನ~~ ತನ್ನ ಒಳಗೆ ಸೆಳೆದು
ಎಳೆದುಕೊಂಡು ತಟಸ್ಥವಾಗಿ ಬಿಡು
ತ್ತದೆ. ನಮ್ಮ ಚಿತ್ತ ಸ್ವಾಸ್ಥ್ಯದ ಭದ್ರತೆ
ಗಾಗಿ ನಾವೂ ಹಾಗೆಯೇ ಮಾಡಬಹುದು.
ನಮ್ಮ ಇಂದ್ರಿಯಗಳು ಹೊರಗಿನ ಪದಾರ್ಥ
ಗಳೊಂದಿಗೆ ಸಂಪರ್ಕ ಬೆಳೆಸಿಕೊಂಡು
ಸದಾ ನಮಗೆ ಯಾವುದಾದರೊಂದು
ಅರಿವನ್ನು ತಂದು ಕೊಡುತ್ತಲೇ
ಇರುತ್ತವೆ; ನಮಗೆ ಬೇಕೆನಿಸಿದಾಗ
ಆ ಇಂದ್ರಿಯಗಳನ್ನು ಒಳಕ್ಕೆ ಎಳೆದು
ಕೊಂಡು ಅಂದರೆ ನಮ್ಮ
ಇಂದ್ರಿಯಕ್ಕೂ ಹೊರಗಿನ ವಸ್ತುವಿಗೂ
ಇರುವ ಸಂಪರ್ಕವನ್ನು ಕಡಿದು
ಕೊಂಡು ಬಿಟ್ಟರೆ ನಮ್ಮ ಪ್ರಜ್ಞೆಯು
ಸುರಕ್ಷಿತವಾಗಿ ಉಳಿಯುತ್ತದೆ.
ಹಾಗೆ ನಿಲ್ಲಿಸುವ ಸಂಯಮ ನನ್ನಲ್ಲಿ
ಸ್ಥಿತಪ್ರಜ್ಞನೆನಿಸಿಕೊಂಡವನು ಸ್ಥಿತಪ್ರಜ್ಞತೆ
ಜಾಗರೂಕತೆಯು ಅತಿ ಮುಖ್ಯ.

ಸುಖಕೊಡುವ ಭೋಗ ವಸ್ತುಗಳನ್ನು ಪಡೆಯುವ
ತವಕ ಸಹಜವಾಗಿಯೇ ಮನುಷ್ಯನಿಂದ
ಆ ಭೋಗವಸ್ತುಗಳಿಗೋಸ್ಕರ ದೂರ
ಹರಿಯುತ್ತದೆ (ಉಕ್ಕುತ್ತದೆ, ಹಾರಿ
ಹೋಗುತ್ತದೆ, ಪ್ರತಿಕ್ಷಣ ಸೆಳೆಯುತ್ತದೆ).
ಆದರೆ ಆ ವಸ್ತುಗಳ ಬಗೆಗಿನ (ಆಸೆಯ)
ಸೆಳೆತಕ್ಕೆ ಒಳಗಾಗುವುದನ್ನು ಮೂಲತಃ ತೊರೆಯಬೇಕಾ-
ದರೆ, ಎಲ್ಲ ಬಯಕೆಗಳನ್ನು ಮೀರಿದ ತನ್ನ
ಸ್ವಾಂತರಂಗ(ತ) ಸ್ವರೂಪವಾದ ಆನಂದ
ಅನುಭವಕ್ಕೆ ಬಂದಿರಬೇಕು.
ಆಗ ಮಾತ್ರವೇ, ಶ್ರೇಷ್ಠವಾದ ದಿವ್ಯ ಜ್ಯೋತಿ
ಬೆಳಗಿನಿಂದಲೇ, ಅದರ ಮುಂದೆ ತುಚ್ಛ
ವಾದದ್ದರ ಬಗೆಗೆ ಸೆಳೆತ ತೊರೆದು
ಪ್ರತ್ಯೇಕವಾಗಿ ನಿಂತ ವ್ಯಕ್ತಿಯ
ಮನಸ್ಸು ಸಂತೃಪ್ತಿ ಹೊಂದುವುದು,
ತನ್ನೊಳಗೆ ನೆಲೆ ನಿಲ್ಲುವುದು.
ಅಂತಾಗುವುದು ಸುಲಭವಲ್ಲ ಎನ್ನುತ್ತಾನೆ
ಶ್ರೀಕೃಷ್ಣ. ಇಲ್ಲಿಯ ಕಷ್ಟಕ್ಕೆ ಮುಖ್ಯ
ಕಾರಣ ನಮ್ಮ ಇಂದ್ರಿಯಗಳ [illegible]
ಸ್ವಾಭಾವಿಕವಾಗಿರುವ [illegible] ಆಳುವಿಕೆ.

ಇಂದ್ರಿಯಗಳು ತುಂಬಾ ಚಪಲ. ಎಂತಹ ಬುದ್ಧಿಶಾಲಿಯಾಗಿದ್ದರೂ, ಅತನು ಎಷ್ಟೇ ಪ್ರಯತ್ನ ಪಟ್ಟರೂ ಅತನ ಮನಸ್ಸಿನ ನಿಯಂತ್ರಣ ಮೀರಿ ತಪ್ಪಿಸಿ ಅದನ್ನು ಹೊರಕ್ಕೆ ಸೆಳೆದು ಕೊಂಡೊಯ್ಯುವಷ್ಟು ಪ್ರಬಲವಾಗಿವೆ. ಈ ಇಂದ್ರಿಯಗಳು ನ್ಯಾಯವಾಗಿ ನಾವು ನನ್ನ ಹೇಳಿದಂತೆ ಇಂದ್ರಿಯಗಳು ಕೇಳಬೇಕು ಆದರೆ ಹಾಗಾಗುವುದು ಬಹಳ ವಿರಳ.

ಎಲ್ಲವನ್ನು ಹತೋಟಿಯಲ್ಲಿಟ್ಟು ಕೊಂಡು ಯೋಗಾತ್ಮನು ತನ್ನಲ್ಲಿರುವ ದೈವಾಂಶದಲ್ಲಿ ತಲ್ಲೀನನಾಗುತ್ತಾನೆ. ಆತನ ಪ್ರಜ್ಞೆಯು ಬಿಟ್ಟಷ್ಟು ನಿಶ್ಚಲವಾಗಿದೆಯೆನ್ನ ಬಹುದು.

ಇಂತಹ ಸಂಯಮವನ್ನು ಸಾಧಿಸಿದವನಿಗೆ ಏನಾಗುತ್ತದೆ? ಸುಖವು ಹೆಚ್ಚಿ ತಪ್ಪಿ ದು:ಖವು ಪ್ರಾಪ್ತವಾಗುತ್ತದೆ.. ಇದು ಹೇಗಾಗುವುದು ಎಂಬ ವಿವರಣೆಯನ್ನು ಶ್ರೀ ಕೃಷ್ಣನು ಹೇಳುತ್ತಾನೆ, —

62 ನಮ್ಮ ಮನಸ್ಸಿನ ನ್ಯೂನತೆ ವಿಷಾದದಿಂದ
ವಸ್ತು ವಿಷಯ ಭಾವನೆ ಸುಳ್ಳು ಮಾಡಿದೆವಲ್ಲ
ಆ ಬಗ್ಗೆ ನಮಗೆ ಕುತೂಹಲವು ಮೂಡುತ್ತದೆ.
ಆ ಕುತೂಹಲದಿಂದ ನಮ್ಮಲ್ಲಿ ಒಂದು
ಕಾಮನೆ (ಬಯಕೆ) ಯೂ ಮೂಡುವುದು
ಹಾಗೆ ಬಯಸಿದ ವಸ್ತು ವು ನಮಗೆ
ಸಿಗದಿದ್ದರೆ (ಸಿಕ್ಕರೂ ಒಮ್ಮೆ
ಎಲ್ಲಿಯ ವರೆಗೆ ಇದ್ದು ದೂರವಾದರೆ)
ಕ್ರೋಧವು ಉದ್ಭವಿಸುತ್ತದೆ.

ಕ್ರೋಧಾವಿಷ್ಟನಾದ ಮನಸ್ಸಿನಲ್ಲಿ
ಮೂಢತೆ (ಕ್ಷೋಭೆ / ಉದ್ವೇಗ)
~~ಆ~~ ಆವರಿಸುತ್ತದೆ
ಮನಃಕ್ಷೋಭೆಯ ಪರಿಣಾಮವಾಗಿ
ನೆನಪು ಮಾಸುತ್ತದೆ
ನೆನಪು ತಪ್ಪಿಹೋದರೆ ಬುದ್ಧಿ
ಯು ಅಳಿಯುವುದು ಸಹಜ!
ಬುದ್ಧಿನಾಶದಿಂದ ವ್ಯಕ್ತಿಯು
ಸಂಪೂರ್ಣನಾಶ (ಅಧಃಪತನ)
ಆಗುವನು

ಇದಕ್ಕೆ ಪ್ರತಿಫಲವಾಗಿ, ಪರಮಾತ್ಮನು
ಮನಸ್ಸನ್ನು ~~ತನ್ನ~~ ತನಗೆ ವಶವಾಗಿ
ನಡೆಸುತ್ತಾ ಆ ಮನಸ್ಸಿನ ಅಧೀನದಲ್ಲಿ
ಇಂದ್ರಿಯಗಳನ್ನು ನಿಯಂತ್ರಿಸುತ್ತಾ
ತಾನಾಗಿಯೇ ತನಗೆ ಲಭ್ಯವಾಗುವ
ಸುಖದುಃಖಗಳನ್ನು ಅನುಭವಿಸು
ವನೇ, ಅವನ ಪ್ರಸನ್ನತೆಯು ಎಂದಿಗೂ
ಕೆಡುವುದಿಲ್ಲ.
ಹಾಗೆ ಮನಸ್ಸನ್ನು ಸದಾ ಪ್ರಸನ್ನತೆ
ಯಲ್ಲಿಟ್ಟುಕೊಳ್ಳುವವನಿಗೆ ಎಂದೂ
ದುಃಖಾನುಭವ ಆಗುವುದಿಲ್ಲ. ದುಃಖದ
ನಿವಾರಣೆಯಿಂದ ಅವನ ಬುದ್ಧಿಯು ಬೇಗನೆ
ಬುದ್ಧಿಯು ಸದಾ ಸ್ಥಿತಿಯಲ್ಲಿರುವುದು
[ಅಮೃತವಾಗಿ ನಡೆಯುತ್ತಾ (ಪ್ರಸಾದದಿಂದ) ಇರುವ
ಮನುಷ್ಯನನ್ನು ಮನಸ್ಸು [illegible] (ಇತರರು)
ಮನಬಂದಂತೆ ಆಧಾರ
[illegible] ಲಕ್ಷ್ಯವಿಲ್ಲದ [illegible]
ಅದಕ್ಕೆ ಕ್ಷಮೆ [illegible] ಗಿಂತ [illegible]
[illegible] ದಂತೆ]

ತನ್ನ ಬಂಧುವಾದವನಿಗೆ
66 ತನ್ನನ್ನು ಗೆಲ್ಲದವನಿಗೆ (ಆತ್ಮಯುಕ್ತನಾಗ
ದವನಿಗೆ) ಬುದ್ಧಿಯು ನಿಶ್ಚಯಾತ್ಮಿಕೆ
(ನಿಯಂತ್ರಣ) ಇರುವುದಿಲ್ಲ; ಅಂತಹವ
-ನಿಗೆ ಸದ್ಭಾವನೆಯೂ ಇರದು;
ತನ್ನ ಹೊಂದದ ಭಾವನೆಯಿಲ್ಲ ಮನದವ
-ನಿಗೆ ನೆಮ್ಮದಿ ಇಲ್ಲವಾದುದು;
ನೆಮ್ಮದಿ ದೊರಕದ ಸುಖಕ್ಕೆ
ಅರ್ಥವೆಲ್ಲಿ?

~~[illegible]~~ ಸದಾ ಹೊರಗಿನ ವಿಷಯಗಳಿಗೆ
ಓಡುತ್ತಿರುವ ಅಲೆದಾಡುವ ಇಂದ್ರಿಯ
ಗಳಿಗೆ ಬಾಲಬಡುಕನಾಗಿ ಯಾವಾತನು
ತನ್ನ ಮನಸ್ಸನ್ನು ಹರಿಬಿಡುತ್ತಾನೆಯೋ
ಅವನ ಹರಿವ ಮನಸ್ಸು ತನ್ನದೇ
ಚೇತನ ಬುದ್ಧಿ (ಪ್ರಜ್ಞೆ)ಯನ್ನು
ಸೆಳೆದು ಹಾರಿಸಿಬಿಡುತ್ತದೆ. ಆ
ರಭಸಕ್ಕೆ ಸಿಲುಕಿದ ಬುದ್ಧಿಯು
ಬಿರುಗಾಳಿಗೆ ಸಿಕ್ಕಿದ ಹಡಗು ಹೊಯ್ದಾಡುವ
ಬಗ್ಗೆಯಂತೆ (ಇಧರ) ನೀರ ಮೇಲೆ
ದಿಕ್ಕು ತೋಚದೆಯು ಸಾಗಲು

[illegible]
[illegible]
— [illegible]

[illegible]
[illegible]

ಅವರ ಕೈಗೆ ನಿಲುಕುವಂತೆ ಅಷ್ಟು
ತಪ್ಪುತ್ತಿದೆ.
ಅಂತರಂಗ ಯಾತ್ರೆಯ ಕಾಲದಲ್ಲಿ:
ತನ್ನ ಇಂದ್ರಿಯಗಳು ಹೊರಗಿನ ಪ್ರಪಂಚದ
ಸ್ಪರ್ಶ ನಿಷ್ಕ್ರಿಯಗೊಳ್ಳುವಂತೆ
ಬಾಗಿಲು ಹಾಕಿದಂತೆ ಅಂದರೆ
ನಿಷ್ಕ್ರಿಯಗೊಳ್ಳುತ್ತಿರುವಾಗ
ಅಂತರಂಗದ ಪ್ರಜ್ಞೆಯು ಸದಾ
ಜಾಗೃತವಾಗಿರುತ್ತದೆ. (ತೆರೆದುಕೊಂಡಿರುತ್ತದೆ)

ಇದಕ್ಕಾಗಿ ತನ್ನ ಸಹಜ ಬುದ್ಧಿಯನ್ನು
ಸದಾ ಗಮನದಲ್ಲಿಟ್ಟಿರುವ
ಜ್ಞಾನಿಯ ವ್ಯವಹಾರವು ಈ
ಲೋಕದ (ಸಾಮಾನ್ಯ) ವ್ಯವಹಾರಕ್ಕಿಂತ
ತಿರುವು ಮುರುವು ಆಗಿರುತ್ತದೆ. ಈ
ಅಂತರವನ್ನು ಮಾರ್ಮಿಕವಾಗಿ ಶ್ರೀಕೃಷ್ಣನು
(ಒಗಟಿನಂತೆ) ಅರ್ಜುನನಿಗೆ ತಿಳಿಸುತ್ತಾನೆ

ಎಲ್ಲಾ ಜೀವಿಗಳಿಗೆ ರಾತ್ರಿಯಾಗಿರುವಾಗ,
ತನ್ನ ಇಂದ್ರಿಯ - ಮನಸ್ಸು - ಬುದ್ಧಿ

[illegible]

[illegible]

ಗಳನ್ನು ಸಂಯಮದಲ್ಲಿ ಇಟ್ಟು ಕೊಂಡಿರುವ
ಯೋಗಿಗೆ ಹಗಲು (ಎಚ್ಚರವಿರುವ
ಜಾಗೃತದ ಸಮಯ) ರಾತ್ರಿಯಾಗುತ್ತದೆ
ಬೇರೆ ಯಾವುದರಲ್ಲಿ ಎಲ್ಲಾ ಪ್ರಾಣಿಗಳು
(ಹಗಲಿನ) ಲವಲವಿಕೆಯಿಂದಿರುವರೋ
ಅಂತಹ ಸಮಯದಲ್ಲಿ ಆ ಯೋಗಿ
ಯು ನಿದ್ರಾವಸ್ಥೆಯಂತೆ ತನ್ನ ಮನವ
ನ್ನು ~~[illegible]~~ ಮಾಡಿರುತ್ತಾನೆ.

...ನು ಮಾತ್ರ ಒಂದಿಷ್ಟು ಹರಿವು ಬಾರದ ಸಮುದ್ರಕ್ಕೆ
ನದಿಗಳ ಎಲ್ಲ ಸೇರಿಗಳ ನೀರು ತಾವಾಗಿ
ಬಂದು ತುಂಬುತ್ತಿರುವಂತೆಯೇ
ಯಾವಾತನಲ್ಲಿ ತಾವಾಗಿ ಕಾಮನೆ
ಗಳು ಒಳಗೆ ಬರುವುದೋ
ಅವನಿಗೆ ಶಾಂತಿಯು ದೊರಕಲು ಸಾಧ್ಯ
ಇದಕ್ಕೆ ವ್ಯತಿರಿಕ್ತವಾಗಿ ~~[illegible]~~
[illegible] ಗಳಿಗೆ [illegible]
[illegible]
ಅವನ ಪ್ರಾಂತ್ಯದಲ್ಲಿ [illegible]
ಅವನ್ನು [illegible] ಹರಿಹಂಚಾಗುತ್ತದೆ.


[illegible]
[illegible]

[illegible]

[illegible]


ಊರಿನ ಮಕ್ಕಳೆಲ್ಲಾ ತನ್ನ ಮನೆಯೊಳಗೆ
ಬಂದು [illegible] ಆಟವಾಡಿದರೆ ಬೇರೆ
[illegible] ಜಗತ್ತಿನ ಮನಸ್ಸು ವಿಶಾಲ. ಹಾಗೆ (ತನ್ನೆಲ್ಲ)
ಆತ್ಮ ಸಂತೃಪ್ತಿ[illegible]ಸಿಗೆ ಒದಗುವ
ಎಲ್ಲ ಜೀವರಾಶಿಗಳೊಂದು ನಿರ್ಲಕ್ಷ —
ಸಂಗಮ ಸುಖಗಳು:
ಅವನು ನಿದ್ರಾಹ, ಸುಖವಾಗಿ
ಅಲ್ಲದಾಗ ಅವನು ಒಬ್ಬ,
ಬಳಿಗೆ ಬಂದರು, ಪ್ರತಿಯೊಬ್ಬ ಬಡವ
ದ್ದನ್ನು ತನ್ನ ಕೊಂದು ಕೊಟ್ಟನೋ,
ತಾನೆಂಬ ಹಮ್ಮು ಮಾಡಿದನೆ,
ಅವನಲ್ಲೇ ಶಾಂತಿ —
ನೆಮ್ಮದಿಯ ಆಗರ, ಸಮಾಧಾನದ
ನೆಲೆ. ಅವನನ್ನು ಬಿಟ್ಟು ಸುಖವು
ಹೋಗದು.
ಹೇಳುವಂತೆ, ಪ್ರತಿಯೊಬ್ಬ ವ್ಯಕ್ತಿಯು
(ಎಲ್ಲ ಜೀವಿಗಳು) ಅತ್ಯಂತ ಒಳಗೆ
ಇರುವ ಸುಖದ ನೆಲೆಯಲ್ಲಿ
ಪರಬ್ರಹ್ಮದ ಸ್ಥಿತಿ (ಅಥವಾ) ಅಸ್ತಿತ್ವ

ಆ ಸಾತ್ತ್ವಿಕ ಸುಖವನ್ನು ಕೈಗೆಟುಕಿಸಿ
ಕೊಂಡಿದ್ದವನಿಗೆ ಇಷ್ಟು ದಿನ ವ್ಯವಹಾರದ
ಗಳು ಯಾವುದೂ ಬೇಕಿಲ್ಲ. ಆ
ಸತ್ಯದ ಅರಿವು ಒಮ್ಮೆ (ಅನುಭವಕ್ಕೆ
ಬಂದರೂ ಸಾಕು) ಅಂತಹುದು
ತುದಿಗಾಲದಲ್ಲಿ ಆ ಅನುಭವವನ್ನು
ಪಡೆದರೆ ಆತನು । ಆತಂಕ
ಬ್ರಹ್ಮಾನಂದವನ್ನು ಹೊಂದುವುದ
ರಲ್ಲಿ ಸಂಶಯವಿಲ್ಲ.



ಕರ್ಮಯೋಗ

ಇದುವರೆಗೆ ಶ್ರೀ ಕೃಷ್ಣನ ವಿವರಣೆಯಿಂದ ಅರ್ಜುನನಿಗೆ ಜ್ಞಾನಯೋಗ ಹಾಗೂ ಕರ್ಮಯೋಗಗಳ ಸ್ವರೂಪದ ಸ್ಥೂಲ ಪರಿಚಯವಾಯಿತು. ಆದರೆ ಆ ವಿವರಣೆಗಳನ್ನು ನೀಡುವಾಗ ಶ್ರೀ ಕೃಷ್ಣನು ಕೆಲವು ಹೇಳಿಕೆಗಳನ್ನು ನೀಡಿರುವ ಪ್ರವೃತ್ತಿಯಿಂದ ಕರ್ಮಫಲಗಳಿಂದಲ್ಲವೆ ಜ್ಞಾನಯೋಗವೇ ಶ್ರೇಷ್ಠ ಎಂದು ಹೇಳಿದನ್ನೆಂದು ಅರ್ಜುನನ ಮನದಲ್ಲಿ ಪ್ರಶ್ನೆಗೆ ಆಸ್ಪದ ನೀಡಿತು.



1. ಅರ್ಜುನನು ಶ್ರೀ ಕೃಷ್ಣನನ್ನು ಕೇಳಿದನು,
ನಿನ್ನ ಈ ಉಪದೇಶಗಳ ವಿವರಣೆಗಳಿಂದ
ಕರ್ಮ ಕಾಂಡಗಳು ಜ್ಞಾನ ಎರಡೂ ಶ್ರೇಷ್ಠ
ಎಂಬ ಅಭಿಪ್ರಾಯವು ಬಂದಿತು.
ಹಾಗಿದ್ದರೆ ನನ್ನನ್ನೇಕೆ ಈಗ ನೀನು
ಈ ಘೋರವಾದ ಕರ್ಮದಲ್ಲಿ
(ಬಂಧು ಹತ್ಯೆ, ಹಿಂಸೆ ಗಳ ~~ಮುಂತಾದ~~
ಪಾಪ ಕರ್ಮದಲ್ಲಿ) ತೊಡಗಿಸುತ್ತಿರುವೆ.?
ನೀನು ಹೇಳುತ್ತಿರುವುದು ಹಾಗೂ ನನ್ನನ್ನು
ಪ್ರೇರೇಪಿಸುತ್ತಿರುವುದು ಇವೆರಡೂ
ಬೇರೆ ಬೇರೆ ಯಾಗಿರುವುದರಿಂದ
ನನಗೆ ಈಗ ಸಂದಿಗ್ಧವು ಉಂಟಾಗಿದೆ.
ಅದನ್ನು ಪರಿಹರಿಸಿ, ಕರ್ಮ ಹಾಗೂ
ಜ್ಞಾನ ಗಳಲ್ಲಿ ಯಾವುದು ನಿಶ್ಚಯವಾಗಿ
ಈಗ ಉತ್ತಮವಾದುದು ಎಂಬುದನ್ನು
ನನಗೆ ಶ್ರೇಯಃಕಾರಿಯಾಗುವಂತೆ
ಕೃಪೆ ಮಾಡಿ ತಿಳಿಸುವೆಯಾ, ಕೃಷ್ಣ?

ಭಗವಂತನು ಹೇಳಿದ್ದುದಿದು -
ಅರ್ಜುನನೆ, ಯೋಗಿಗೆ ಒಳ್ಳೆಯದು ಪ್ರಿಯ
ಎನ್ನುವುದು ಹೇಳಿದೆ. ಅದಕ್ಕೆ ಉತ್ತರ
ಬೇಕಲು ನಾವೀಗ ಇನ್ನೊಂದನ್ನು
ಬಿಟ್ಟು ಆಗ ಅವರೆಲ್ಲ ನಿನ್ನ
ನಮ್ಮನ್ನು ಆಹಾರವನ್ನು ಸೇವಿಸ
ಬೇಕಿದೆ, ಶ್ರೇಷ್ಠವಾದ ಫಲವನ್ನು
ಪಡೆಯಲು ಅರ್ಹದ ಶಿಕ್ಷಣ ದೃಢ
ಬದ್ಧವಾದ ಆಧ್ಯಾತ್ಮಿಕ ಪ್ರಗತಿ
(ಪ್ರಗತಿ) ಯಾಗಿದೆ. ಇದು ನಮಗೆ
ಯಾವುದೇ ಸಾಧ್ಯತೆ ಆಧ್ಯಾತ್ಮಿಕ
ಹಂತದ ಶಿಕ್ಷಣಕ್ಕೆ ಯಾವುದೇ
ಅನುಭವಗಳು ಬೇಕಾಗುವುದು
ಇನ್ನೊಂದು -
ಆಹಾರದ ಯಾಗಗಳು ಎನ್ನುವ
ಶಿಕ್ಷಣದವರು, ಸಾಧಕನು ಎನ್ನುವ
ಯಾವುದೇ ಶಿಕ್ಷಣ ಸಾಗರ ಬೇಕಿದೆ.
ಬಂದುದನ್ನು ಆಹಾರದ ಶಿಕ್ಷಣ
ಯಾವುದು ಆಧ್ಯಾತ್ಮಿಕ ಶಿಕ್ಷಣ.
ನನ್ನನ್ನು ಯಾವುದರ ಎಲ್ಲ ಪ್ರಿಯಗಳ.

ಬಿಟ್ಟು ಬಿಡುವುದಲ್ಲ. ಎಲ್ಲವನ್ನು ಬಿಟ್ಟು ತಪ್ಪಿಸಿಕೊಳ್ಳುವುದನ್ನೇ ನಿಜವಾದ ತತ್ತ್ವ ಮಾರ್ಗ ಎಂದು ಯಾರೂ ಒಪ್ಪಿಲ್ಲ.

~~ಸಾಮಾನ್ಯವಾಗಿ~~ ವಸ್ತುತಃ ಯಾವೊಂದು ಜೀವಿಯೂ ಅರೆಕ್ಷಣವೂ ಕರ್ಮವನ್ನು ಮಾಡದೆ ಇರಬಲ್ಲದೆಂಬುದು ಸಾಧ್ಯವಿಲ್ಲದ ಮಾತು. [illegible] ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ, ಅಂಗಾಂಗಳಿಂದಾಗಲೀ ಏನೊಂದನ್ನೂ ಮಾಡದೆ ಯಾರಾದರೂ ಕ್ಷಣಕಾಲ ತಾನೇ ಇರಬಲ್ಲರೇನು? ಅವರವರ ಹುಟ್ಟು ಗುಣಕ್ಕನುಸಾರವಾಗಿ ಪ್ರತಿಯೊಬ್ಬರೂ ಸದಾಕಾಲವೂ ಏನಾದರೊಂದನ್ನು ಯತ್ನವಿಲ್ಲದೆಯೂ ಮಾಡುತ್ತಲೇ ಇರಬೇಕಾಗುತ್ತದೆ. ಪ್ರತಿಯೊಬ್ಬರಾ ಅಯತ್ನಪೂರ್ವಕವಾಗಿ ಮಾನಸಿಕವಾಗಿ ತಮಗೇ ತಿಳಿಯದಂತೆ ಸಾಕ್ಷಾತ್ ವಾಗ್ರೂಪದಲ್ಲಿ ಮಾಡುತ್ತಿರುವ ಕರ್ಮಗಳ ಫಲವನ್ನು ದೇವರು ಪ್ರತಿಯೊಬ್ಬರೂ ಭೋಗಿಸಬೇಕಾಗಿದೆ.

ಅಂದರೆ ನಾವು ಕರ್ಮ ಮಾಡುವಲ್ಲಿಯು
ಅಸ್ವತಂತ್ರರು.
ಒಂದು ವೇಳೆ ಕೈ ಕಾಲುಗಳ ಮೂಲಕ
ಏನನ್ನು ಮಾಡದಿದ್ದರೂ ಮನಸ್ಸು
ಮನಃಪೂರ್ವಕವಾಗಿ ಒಂದು ಸುಖ
ದುಃಖದ ವಿಷಯವನ್ನು ಚಿಂತಿಸುತ್ತಿದ್ದರೆ
ಅದು ಅತನು ~~ಕನ್ನನ್ನು~~ ತಾನೇ
ನಿಷ್ಕ್ರಿಯನೆಂದು ತಿಳಿದರೆ
ಅದನ್ನು ಒಪ್ಪಲಾಗದು. ಹಾಗೆಂದು
ಕೊಂಡವ ಒಬ್ಬ ಮಿಥ್ಯಾಚಾರಿ
(Hippocrate) ಅನಾಚಾರಿಯೆಂದು
ಅರ್ಥ ಮಾಡಿಕೊಳ್ಳಬೇಕು, ಆದ್ದ

ಯಾವನು ತನ್ನ ಇಂದ್ರಿಯಗಳನ್ನು ಮನಸ್ಸಿನ
ಹತೋಟಿಯಲ್ಲಿಟ್ಟುಕೊಂಡು, ಕೇವಲ
ಕರ್ಮೇಂದ್ರಿಯಗಳಿಂದ ಕರ್ಮಗಳನ್ನು,
ತಾನು ತಟಸ್ಥನಾಗಿದ್ದುಕೊಂಡು ಮಾಡುತ್ತಾನೋ
ಅಂತಹವನೇ ಆ ಕರ್ಮಯೋಗಿಯೆನಿಸಿ
ಎಲ್ಲ ಜನರು ವ್ಯವಹಾರ ಮಾಡುವ ಕರ್ಮಗಳಿಗಿಂತ
ವೈಶಿಷ್ಟ್ಯಪೂರ್ಣನಾದವನಾಗುತ್ತಾನೆ.

ಅರ್ಜುನ, ನೀನು ಎಲ್ಲ ಕೆಲಸವನ್ನು ತಪ್ಪದೆ ಮಾಡು. ಆಲಸ್ಯದಿಂದಿರುವುದಕ್ಕಿಂತಲೂ ಕರ್ಮನಿರತನಾಗಿರುವುದು ಒಳ್ಳೆಯದು. ಎಲ್ಲ ಕೆಲಸಗಳನ್ನು ಅನಾಸಕ್ತಿಯಿಂದ ಮಾಡುವವನಿಗೆ ಎಲ್ಲ ಕೆಲಸಗಳೂ ಒದಗಿ, ಕೆಲಸ ಶರೀರ ನಿರ್ವಹಣೆಯೂ ಕಷ್ಟಕರವಾಗಿರುವುದು.

ಕರ್ಮಬಂಧನ (ಕೆಲಸಗಳ ಗೊಡವೆ)ಗಳನ್ನೆಲ್ಲ ಈ ಸಂಸಾರಕ್ಕಿಂತಲೂ ಬೇರೆಯೇ ಮಾಡುವುದು | ಬೇರೆಯಾದ ಕರ್ಮವು ಯಜ್ಞಾರ್ಥವಾಗಿ (ಅ: ನಿಸ್ವಾರ್ಥವಾಗಿ / ಸಮರ್ಪಣಾ ಭಾವದಿಂದ) ಮಾಡುವ ಕರ್ಮದು. ಎಲ್ಲ ಗೊಡವೆಗಳಿಂದ ತಪ್ಪಿಸಿಕೊಂಡು ಆ ಬಗೆಯ ಕರ್ಮವನ್ನು ಮಾಡು, ಅರ್ಜುನ. ನಾನು ನಿನಗೆ ತಿಳಿಸುತ್ತಿರುವ ಈ ಯಜ್ಞ ಎಂಬ ವಿಚಾರ, ಇದೇನೂ ಹೊಸತಲ್ಲ. ಈ ಯಜ್ಞ ಭಾವನೆಯೊಂದಿಗೆ ಎಲ್ಲರನ್ನೂ ಸೃಷ್ಟಿಸಿದ ಪ್ರಜಾಪತಿಯು ಅವರೆಲ್ಲರಿಗೂ ಹೇಳಿದನು

ಬಸವಣ್ಣ ಕ್ರಿಯಾಶೀಲರು ಹೇಗೆ ಆದರು?

ಬಸವಣ್ಣ ಜಾತಿ ನೀತಿಯಲ್ಲಿ ಬದಲಿಸಿದರೇ?

ಇವೆ, — ಈ ಯಜ್ಞ ಪ್ರಮಾಣದಲ್ಲಿ
ನಿಮ್ಮೆಲ್ಲರ ನಿಮ್ಮ ಇಷ್ಟಾರ್ಥಗಳನ್ನೆಲ್ಲ
ಈಡೇರಿಸಿ ಕೊಡುತ್ತದೆ. ಈ
ಯಜ್ಞ ಮಾಧ್ಯಮದಲ್ಲಿ ನೀವು ದೇವತೆ-
ಗಳನ್ನು ಕರೆಯಿರಿ, ದೇವತೆಗಳು ನಿಮ್ಮ
ಹಿತಕ್ಕೆ ಯಜ್ಞ ಭಾವನೆಯಿಂದಲೇ
ಬರಲಿ. ಹೀಗೆ ಪರಸ್ಪರವಾಗಿ
~~ಯಜ್ಞ [illegible] (ಭಾಗ) [illegible]~~
~~[illegible]~~
ತೃಪ್ತಿಗೊಳಿಸುತ್ತಾ ನೀವು — ಮಾನವರು
ಹಾಗು ದೇವತೆಗಳು — ಶ್ರೇಯಸ್ಸನ್ನು
ಹೊಂದುವಿರಿ.
ಯಜ್ಞ ಫಲ ತೃಪ್ತಿಯಲ್ಲಿ ~~[illegible]~~ ಹೊಂದಿದ ದೇವತೆ
ಗಳು ಆ ಉದ್ದೇಶದಿಂದಲೇ ಮಾನವರು
ಬೇಡಿದ / ಬಯಸಿದ ಭಾಗಗಳನ್ನೆಲ್ಲ
ನೀಡಲಿ. ಹಾಗೆ ಪಡೆದ ಭಾಗದಲ್ಲಿ
ಇನಿತನ್ನು ದೇವತೆಗಳಿಗೆ ನಿವೇದನೆ
ಮಾಡದೆ ಸ್ವಾರ್ಥದಿಂದ ಭೋಗಿಸುವವನು
ಶುದ್ಧ ಕಳ್ಳನೇ ಸರಿ.

ಯಜ್ಞ ಮಾಡಿದ ಬಳಿಕ (ಉಳಿದದ್ದನ್ನು)
ತಿನ್ನುವವರಿಗೆ ಯಾವ ಪಾಪವೂ
ಬರದು. ಕೇವಲ ತಮಗಾಗಿ
ಆಹಾರವನ್ನು ಸಿದ್ಧಪಡಿಸಿಕೊಳ್ಳು
ವವರು ಪಾಪವನ್ನು ಮಾಡಿದವನ್ನೇ
ತಿನ್ನುವವರು.
ಹೇಳಬೇಕೆಂದರೆ ಮಿಗಿಲು ಬೀಳ-
ಯುವರಿಗೆ ಹೇಳುವ ಬಗ್ಗೆ ತಿಳಿಸು
ಲಲ್ಲಿಯ ಸಿದ್ಧಾಂತದ ಮೂಲ-
ಪಾಠವನ್ನು ಒಂದು ಸೂತ್ರ) ಯಾಂತ್ರಿಕ
ಒತ್ತಿ ಹೇಳಿದಂತೆ ಗಾಂಧೀಜಿ ಕೂಡ ಸರಳವಾದನ್ನು
ಶ್ರೀ ಕೃಷ್ಣನು ಬದುಕಿನಲ್ಲಿ
ತೋರಿಸುತ್ತಾರೆ.
ನೋಡು ಬದುಕನ್ನು, ಎಷ್ಟು ತಿಳಿದ
ಕೆಲಸಗಳಿಂದ ಯಜ್ಞವು
ನಡೆಯುತ್ತದೆ; ಯಜ್ಞ ಕ್ರಿಯೆ
~~ಮಳೆಯ ಮಳೆಯು~~ ಮಳೆ ಮಳೆ
ಯನ್ನು ತರುತ್ತದೆ, ಮಳೆಯಿಂದ
ದವಸ ಧಾನ್ಯ ಉತ್ಪತ್ತಿಯಾಗುತ್ತದೆ
ನಿಷ್ಪಾದನೆಯಾದ ಬೆಳೆಯಿಂದ ಎಲ್ಲ

ಪ್ರಾಣಿಗಳು ಹುಟ್ಟುತ್ತವೆ, ಬದುಕುತ್ತವೆ. ಈ ಸೃಷ್ಟಿ ನಾವು ಮಾಡಲು ಹೇಳಿದ ವಿಹಿತ ಕರ್ಮಗಳಿಂದ ಬರುವ ಯಜ್ಞಗಳಿಂದಲೂ, ಸೃಷ್ಟಿಯ ವಿವರಗಳನ್ನುಳ್ಳ ವೇದಗಳು ಅವ್ಯಕ್ತವಾದ ಅಕ್ಷರ ಬ್ರಹ್ಮದಿಂದಲೂ ಬಂದಿವೆ ಎಂದು ತಿಳಿ.

ಅನಾದಿ ಕಾಲದಿಂದಲೂ ಬಂದಿರುವ ಈ ಚಕ್ರವನ್ನು ಯಾವನು ತಿರುಗಿಸುವುದಿಲ್ಲವೋ ಅವನು ಕರ್ಮ ಪತಿತನಾಗಿ, ಕೇವಲ ಭೋಗಾಸಕ್ತನಾಗಿದ್ದು ಪಾಪದಿಂದ ಇಂದ್ರಿಯ ಸುಖ ಅರಿ, ತನ್ನ ಜೀವಿತವನ್ನೇ ವ್ಯರ್ಥ ಮಾಡಿಕೊಳ್ಳುವನು. ಅಂತಹವನಿಗೆ ಪ್ರತಿನಿತ್ಯವಾಗಿ, ಯಾವಾತ್ಮನು ಆತ್ಮ ಸಂತುಷ್ಟನಾಗಿದ್ದರೂ ನಿಃಸ್ವಾರ್ಥದಿಂದಲೇ ಸ್ವಾರ್ಥ ರಹಿತನಾಗಿದ್ದುಕೊಂಡು ಎಲ್ಲಾ ಕೆಲಸಗಳಲ್ಲೂ ನಿರತನಾಗಿರುವನೋ, ಅಂತಹವನಿಗೆ ಕಾರ್ಯಭಾರ (ಕಾರ್ಯದ ಚಿಂತೆ) ಏನೂ ಇರದು.

ಕೆಲಸವು ಪೂರ್ತಿಯಾದ್ದರಿಂದಲೂ ಕೆಲಸವು ಕೈಗೊಳ್ಳದೆ ಬಿಟ್ಟದ್ದರಿಂದಲೂ ಅವನಿಗೆ ಆಗಬೇಕಾದ್ದಿಲ್ಲ. ಯಾವ ಬಾಧ್ಯತೆ

[illegible] ಕಷ್ಟದಲ್ಲಿ

ಸಂಪ್ರದಾಯ [illegible]

[illegible]

ಪರಾವಲಂಬನೆಯನ್ನು ಇಷ್ಟಪಡುವುದಿಲ್ಲ.
ಅವನೊಬ್ಬ ವಿರಕ್ತ ವ್ಯವಸಾಯಿ.
ಕೆಲಸವು ಸಫಲವಾದಾಗ ಅವನಿಗೆ ಹಿಗ್ಗು
ಇಲ್ಲ. ಅದು ವಿಫಲವಾದರೆ ಇತರರನ್ನು
ದೂರುವುದನ್ನಾಗಲೀ, ಚಿಂತೆ ಮಾಡುವುದನ್ನಾ
ಗಲೀ ಮಾಡುವುದಿಲ್ಲ.
ಅರ್ಜುನ, ಭೀಮ ಈ ಬಗೆಯ ಕರ್ಮಯೋಗಿ-
ಯಾಗಲು. ಅಂಟಿಕೊಳ್ಳದೆ ಕರ್ಮ ಮಾಡ-
ನಾಗಿರುವುದರಿಂದ ಮನುಷ್ಯನಿಗೆ ಶ್ರೇಷ್ಠತೆ
ಯು ಪ್ರಾಪ್ತವಾಗುವುದು.
ಈ ಬಗೆಯ ಕರ್ಮನಿಷ್ಠ ಯೋಗದಿಂದಾಗಿಯೇ
ಅಂದು ಜನಕ ಮುಂತಾದವರು
ಕೃತಕೃತ್ಯರಾದದ್ದನ್ನು ಎಲ್ಲರೂ ಬಲ್ಲರು.
ಇಲ್ಲದೆ ಲೋಕ ಸಂಗ್ರಹವನ್ನು ದೃಷ್ಟಿಯಲ್ಲಿ
ಟ್ಟುಕೊಂಡೂ ಕೂಡ ಕರ್ಮಗಳನ್ನು ಮಾಡ
ಬೇಕಾಗಿದೆ. ಏಕೆಂದರೆ ಸಮಾಜದಲ್ಲಿ
ಮುಖಂಡರು ಹೇಗೆ ನಡೆದುಕೊಳ್ಳುವರೋ
ಅದನ್ನೇ ಸಮಾಜವೆಂಬ ಭಾವನೆಯಿಂದ
ಉಳಿದವರೆಲ್ಲರೂ ಅನುಸರಿಸುವರು.

[illegible]

ನಾನು ನನ್ನ [illegible]

[illegible]

ನಾನೇನಾದರು [illegible]

ಈಗ ನನ್ನನ್ನೇ ನೋಡು, ಇಲ್ಲ ನನಗೆ
ಯಾವ್ಯದರಿಂದಲೂ ಏನೂ ಆಗಬೇಕಾದ್ದಿಲ್ಲ
ಯಾವುದು ನಡೆದರೂ, ಬಿಟ್ಟರೂ ನನಗೆ
ಬಂಧೀ. ಆದರೂ ನಾನು ಕೆತನವ್ಯ ಪರ-
ನಾಗಿದ್ದೇನೆ. ಏಕೆಂದು ಬಲ್ಲೆಯೇನು?
ಎಚ್ಚರಿಕೆವ್ಯಹಿಸ್ಲ ನಾನು ಇವನ್ನೆಲ್ಲ ಬಿಟ್ಟ್
ಬಿಟ್ಟರೆ ಮುಂದೆ ಎಲ್ಲರೂ ಎಲ್ಲವನ್ನೂ
ಪರಿತ್ಯಜಿಸಿಯಾರು. (ನೋಡಿ ನೋಡಿ ತತ್ತ್ವವನ್ನು
ತಿಳಿದು ಎಲ್ಲವನ್ನೂ ಬಿಟ್ಟದ್ದರೂ, ಅಜ್ಞಾನಿಗಳು
ಅದನ್ನು ತಿಳಿಯದೆಯೂ ಎಲ್ಲವನ್ನೂ
ಬಿಟ್ಟು ಕರ್ಮಭ್ರಷ್ಟರಾಗಿಬಿಡುತ್ತಾರೆ)
ಆದ್ದರಿಂದ ಸ್ವಲ್ಪವೂ ಬೇಸರವಿಲ್ಲದೆ
ನಾನು ಎಲ್ಲ ಕರ್ಮವಿಧಿಗಳನ್ನು ಪೂರೈಸು
ತ್ತೇನೆ. ಹೀಗಾದರೆ ನನ್ನ ದಾರಿಯಲ್ಲೇ
ಎಲ್ಲ ಮನುಷ್ಯರು ನಡೆದು ಕರ್ಮವನ್ನೇ
~~ಬಿಟ್ಟರು.~~ ತೊರೆದಾರು
ಹಾಗೆ ಕರ್ಮವನ್ನೇ ಎಲ್ಲರೂ ಬಿಟ್ಟುಬಿಟ್ಟರೆ
{೨೪ ಶ್ಲೋಕ} ಅದರಿಂದ ಲೋಕವೆಲ್ಲ ಕೆಲಸಿ ಹೋದೀತು
(ಹಾಳಾಗಿ ಹೋದೀತು) ಹಾಗೂ ಆ ಕಲಸುವಿಕೆಗೆ
ನಾನೇ ಕಾರಣನಾಗಿ ಕರ್ಮಗಳನ್ನೆಲ್ಲ

ನಾಸ್ತಿಕವಾದವೆಂಬ ಅಪವಾದಕ್ಕೆ
ನಾನು ತುತ್ತಾದೆನು.
ಹಿಂದೆ ವ್ಯಕ್ತಿಗಳು ಹೇಳುತ್ತೇನೆ, ಅಜ್ಞಾನ,
ಸ್ವಾರ್ಥಪರರಾಗಿ ಬುದ್ಧಿಗೇಡಿಗಳು
ವಿಶ್ವ ಅಸತ್ಯವಾದುದ ತಿಳಿದು (ದೇವ
ಭಾವನೆಯಿಂದ) ಕೆಲಸಗಳನ್ನು
ಮಾಡುತ್ತಿರುವರು ಕೀರ್ತಿ
ತನ್ನ ಯಶಸ್ಸಿಂದಲೇ ಎಲ್ಲೆಡೆಗಳು
ಸಾಮಾನ್ಯ ಜನನ್ನು ಮುನ್ನಡೆಸಲಿಕ್ಕಾಗಿ
ಮಾತ್ರ ನಾನು ತಾಪ ಮಾತ್ರ
ಬಂಧನೆಯನ್ನು ತೊಲಗಿಸದೆ ಎಲ್ಲ
ಕೆಲಸಗಳನ್ನು (ತಮ್ಮದಲ್ಲವೆಂಬ
ನಿಷ್ಠೆಯ ಜ್ಞಾನ ಸಾಕ್ಷಾತ್ಕಾರಕ್ಕಾಗಿ) ಮಾಡು
ತ್ತಿರುವೆನು.
ಇನ್ನೊಂದು ಮಾತು, ನಾನು ಬುದ್ಧನಂತೆ
ನಡೆದೆನು, ಸತ್ಕರ್ಮಗಳಲ್ಲಿ ತೊಡಗಿರುವ
ನಾಯನ್ನು ಆಗಿ ಬುದ್ಧನಲ್ಲಿ ಗೌರವದಿಂದ
ಮಾಗುವಂತೆ ಅಧಿಕ ಉತ್ಸಾಹ ಕೆಲಸ
ಮಾಡುವಂತೆ ನಾಸ್ತಿಕವಾದ ಇರಲಿಲ್ಲ.
ತನ್ನನ್ನು ಬುದ್ಧನನ್ನು ತಕ್ಕ

[illegible]
[illegible]

[illegible]

[illegible]

ಕೆಲಸಗಳಲ್ಲಿ ತೊಡಗಿಸುವ ದಶೆಯಲ್ಲಿಯೂ
[illegible] ಜ್ಞಾನಿ ತನ್ನನ್ನು ಕರ್ತಾ ಎಂದು ಬಗೆಯಲಿ.

ಸಾಮಾನ್ಯರು ಕೆಲಸಗಳೆಲ್ಲವೂ ತಮ್ಮಿಂದ ಆಗುತ್ತಿವೆ ಎಂದು ಭಾವಿಸುತ್ತಾರೆ ?
ಪ್ರಕೃತಿಯ ಗುಣಗಳಿಂದಾಗಿ ನಡೆಯುತ್ತಿರುವ ಕೆಲಸಗಳೆಲ್ಲವನ್ನೂ ತಾನು ಮಾಡುತ್ತಿರುವೆನೆಂದು ಆತ್ಮನ ಮೇಲೆ ಹೊರಿಸುವ ಅಹಂಕಾರದ ಪ್ರಭಾವದಿಂದ ಭ್ರಮಿಸುವರು.
ಇದಕ್ಕೆ ವ್ಯತಿರಿಕ್ತವಾಗಿ ಗುಣಗಳ ನಾನಾ ಕರ್ಮಗಳ ಸ್ವಭಾವ, ಭೇದಗಳನ್ನು ತಿಳಿದವನು ಇಲ್ಲಿ ಕೇವಲ ಗುಣಗಳು ಗುಣಗಳೊಂದಿಗೆ ಕೆಲಸ ಮಾಡುತ್ತಿವೆ (ತಾನು ಇವಕ್ಕೆಲ್ಲ ಕೇವಲ ಸಾಕ್ಷಿಭೂತನಾದವನು) ಎಂದು ಸ್ಪಷ್ಟವಾಗಿ ತಿಳಿದು ನಿರಭಿಮಾನಿಯಾಗಿರುತ್ತಾನೆ.
ಹೀಗೆಂದು ತಿಳಿಯದ, ಪ್ರಕೃತಿಯ ಗುಣಗಳಲ್ಲಿ ತಾವು ಸಿಕ್ಕಿರುವೆವೆಂದು ಭ್ರಾಂತರಾದ ಮೂಢರು ಆ ಗುಣಕರ್ಮಗಳ ಕರ್ತೃ ಭೋಕ್ತೃಗಳಲ್ಲಿ ತಮ್ಮನ್ನ

[illegible]

ನಿಲುಕಿನಿ ಕೊಳ್ಳುವರು. ಇಂತಹವರಿಗೆ
ತಿಳಿಕೆ ಯಾದರೂ ನು ತಿಸುವುದ್ಯೆಕೆ ಕೊಡ
ಬೇಕೆ ಎನಿಸಿದಾ ಇವರಲ್ಲಿ ಕೆಲವು
ಬದಿಗಿ ತೆಪ್ಪಗೆ ಕುಳಿತುಕೊಂಡು ದಿನಗಳ
ಕರ್ತವ್ಯ ಪರಾಙ್ಮುಖ ಪರಿಣಾಮ ನಿ ಬಾರದು. ನಿಷ್ಕ್ರಿಯರಾಗುವರು
ಬಿಟ್ಟಿರುವಲ್ಲ ಜ್ಞಾನಿಯಾಗಿ ಅಜ್ಞಾನಿಯಾಗಿ
ಮಾಡುವ ಕಾರ್ಯ ಸಮಯಕ್ಕೆ ಬಂದರೆ
ಅನುಕೂಲ ಮನಸ್ಸು ಕೊಡಬೇಕು. ಇದೇ
ಆಸ್ತಿಕತೆ.

ಇಂತಹ ಕರ್ತವ್ಯ ಪರತೆಯೇ ಮುಖ್ಯ, ಕರ್ತವ್ಯ
ಪರಾಙ್ಮುಖತೆಯು ತಪ್ಪು.
ಉಪದೇಶ, ನೀವೆಲ್ಲ ಕರ್ತವ್ಯ ಶ್ರದ್ಧೆಯಿಂದ
ನಿಮ್ಮ ದೃ, ನಾಗು, ಮಕ್ಕಳು, ಎಲ್ಲ ಕೆಲಸಗಳನ್ನು
ಪಾಲಿಸುವುದನ್ನು ನನ್ನ ಮೇಲೆ ಬಿಡಿ. ಎಲ್ಲ
ಬಿಟ್ಟಾಗ ಕಾರ್ಯವನ್ನೇ ಬಿಟ್ಟ ಮನುಷ್ಯರ –
ಗಳನ್ನು ಕೊಡುವ ಕಾಯಕ ಮನಸ್ಸಿನ ಬೇರೆ
ಯನ್ನು ಕಳೆದು ಕೊಂಡು ಹರಿದಾಸ
ಕೈಂಕರ್ಯದಿಂದ ಯುದ್ಧ ಮಾಡು.
ನೀನೇಕೆ ಅಳುವೆ, ನಿನಗೆ ನನ್ನಲ್ಲಿ ಶ್ರದ್ಧೆ

[illegible]

[illegible]

[illegible]

ಇದು ನನ್ನ ಶ್ರೇಷ್ಠ ಸಿದ್ಧಾಂತವು ಇಲ್ಲಿದೆ
ಅಸೂಯೆ ಪಡದೆ ಶ್ರದ್ಧೆಯಿಂದ ನಡೆಸುವ ಎಲ್ಲಾ
ಮಾನವರು ತಮ್ಮ ಕರ್ಮಗಳಿಂದ
(ಕರ್ಮಬಂಧನ ಪಾಶದ) ಬಿಡುಗಡೆ
ಹೊಂದುವರು. ಆದರೆ ಅವರ ನಾಶವು
ತಪ್ಪುವುದಿಲ್ಲ.
ಇದಕ್ಕೆ ಪ್ರತಿಯಾಗಿ, ಅವರು ನನ್ನ
ಅಭಿಪ್ರಾಯವನ್ನು ಟೀಕಿಸಿ, ತಾವೇ
ಜಾಣರೆಂದು ಬಗೆದು, ತಮ್ಮದೇ
ತರ್ಕದ ಆಧಾರ ಬುದ್ಧಿಶಕ್ತಿಗಳಿಗೆ
ತಕ್ಕಂತೆ ವ್ಯವಹರಿಸುವವರು ಅಂತಹ
ವರನ್ನು ದಿಕ್ಕು ತಪ್ಪಿದ ಮಂದಮತಿಗಳೆಂದು
ತಿಳಿ.
ಎಷ್ಟೇ ಓದಿಕೊಂಡಿರಲಿ, ಅವನವನ
ಪ್ರಕೃತಿಗೆ ತಕ್ಕಂತೆ (ಪ್ರತಿಯೊಬ್ಬರು)
ವರ್ತಿಸುವನು. ಯಾವ ನಿಗ್ರಹವು ಇದಕ್ಕೆ
ಹೊರತಲ್ಲ. ಇದನ್ನು ತಡೆಹಿಡಿಯುವುದರಿಂದ
ಫಲವು ಏನು ದೊರೆತೀತು ?
ಮನುಷ್ಯನಲ್ಲಿರುವ ಇಂದ್ರಿಯಗಳು ತಮ್ಮ
ವಿಷಯಗಳನ್ನು ಸೆಳೆಯುವ ಬಾರ

ಪ್ರಪಂಚದ ವಿಷಯಸುಖಗಳು ಇಂದ್ರಿಯಗಳ
ಪ್ರೀತಿ ಪಾತ್ರಗಳು ಬೆರೆತು ಕೊಂಡು ಬಿಟ್ಟಿವೆ
ಇಂದ್ರಿಯಗಳನ್ನು ಹಿಡಿದು ಹತೋಟಿಗೆ
ತಾರದಿದ್ದರೆ ಪ್ರಕೃತಿಯು ಪತನಕ್ಕೆ
ಇದೇ ಕಾರಣವಾಗುತ್ತದೆ.

ಇನ್ನೊಬ್ಬನದಲ್ಲಿ ತಪ್ಪಿದ್ದರೂ ಸುಲಭವಾದ
ಮಾರ್ಗವಿರುವುದು ಕಷ್ಟ ಕರವಾದುದು
ಇರುವುದು ಎಂಬ ತಾರತಮ್ಯ ಮಾಡುವು
ದಾದರೆ ಸ್ವಧರ್ಮದ ಆಚರಣೆಗೆ
ಆದ್ಯತೆ ನೀಡಬೇಕು ಎಂದು ಶ್ರೀಕೃಷ್ಣನ
ಅಭಿಪ್ರಾಯ. ಇವನ ಮತದಂತೆ,
ಸ್ವಧರ್ಮದಲ್ಲಿ ಯಾವ ನ್ಯೂನತೆಗಳು
ಕೊರತೆಗಳಿದ್ದರೂ ಅದನ್ನು ಅನು
ಸರಿಸುವುದಕ್ಕೆ ಆದ್ಯತೆ ನೀಡಬೇಕೇ
ವಿನಾ ಆಕರ್ಷಕವಾಗಿ ಕಾಣಬಹುದಾದ
ಅನ್ಯಧರ್ಮಕ್ಕಲ್ಲ. ಇನ್ನು ಕರ್ತವ್ಯಗಳಿಂದ
ನಿರ್ವಾಹದಲ್ಲಿ ಸಂಭವಿಸುವ
ಪ್ರಮಾದಗಳನ್ನು ಗಮನದಲ್ಲಿಟ್ಟುಕೊಂಡು
ಹೇಳುತ್ತಿರುವ ಶ್ರೀಕೃಷ್ಣನ ಅಭಿಪ್ರಾಯದ

ಸಂಸ್ಕೃತಿ [illegible]

ಪರಮಾತ್ಮನ ಉತ್ತರ

ಶಿವ [illegible]

ಪ್ರಕಾರ ಪ್ರತಿಯೊಬ್ಬನಿಗೂ ತನ್ನ ಧರ್ಮದಲ್ಲಿಯೇ ಅವಸಾನವಾದರೂ ಒಳ್ಳೆಯದು, ಪರಧರ್ಮವು ಭಯಾನಕವಾದದ್ದರಿಂದ ಅದಕ್ಕೆ ಪ್ರಲೋಭನೆಗೊಳ್ಳಬಾರದು.


ಕೆಟ್ಟ ಕೆಲಸಗಳು ಸಂತಾಪಕಾರಿ ಎಂದು ಎಲ್ಲರಿಗೂ ಗೊತ್ತಿದೆ. ಆದರೂ, ಅದನ್ನು ಬಲ್ಲರೂ, ಯಾಕೆ, ಯಾವುದೋ ಒತ್ತಾಯಕ್ಕೊಳಗಾದವರಂತೆ ಎಲ್ಲರೂ ದುಷ್ಕರ್ಮಗಳನ್ನು ಮಾಡುತ್ತಾರಲ್ಲ. ಇದಕ್ಕೆ, ಈ ಪಾಪ ಪ್ರೇರಣೆಗೆ ಕಾರಣವೇನೆಂದು ಅರ್ಜುನನು ಪ್ರಶ್ನಿಸುತ್ತಾನೆ. ಅರ್ಜುನ, ಅದೇ ಕಾಮ (ಬಯಕೆ), ಅದೇ ಕ್ರೋಧ, ಅದು ರಜೋಗುಣ-ದಿಂದಾದದ್ದು. ಮಹದಾಶೆಯು ಮಹಾಪಾಪಕ್ಕೆ ಕಾರಣವಾಗುವ ಈ ಭಯಂಕರ ಶತ್ರುವನ್ನು ಮೊದಲಿನಿಂದಲೇ ಹತ್ತಿಕ್ಕು (ಪ್ರಭು ಅಗತ್ಯ!).
ಸ್ವಲ್ಪ ಕಡಿಮೆ ದರ್ಜೆಯದು ಅದು ಹೊಗೆಯಿಂದ ಕೂಡಿರುತ್ತದೆ, ಬೆಂಕಿಯನ್ನು

ಆಲಿಸುವ ಕಿವಿಯಂತೆ, ಕಣ್ಣು ಚಿತ್ರವನ್ನು
ನೋಡುವ ಕಣ್ಣಿನಂತೆ,
ಶಬ್ದವನ್ನು ಗ್ರಹಿಸುತ್ತಲೂ [illegible]
ಕೇಳುವ ಕಿವಿ ಹೇಳಿದಂತೆ
ಇದು ಎಂತಹ ಅದ್ಭುತವಾದ ಬುದ್ಧಿಯನ್ನು
ಮನುಷ್ಯ ಪಡೆದಿದ್ದಾನೆ, ಸದಾ ಕಾಲದ
ವೈಭವದಿಂದಾಗಿ, [illegible] [illegible]
ಬಯಕೆಯ ಬೆಂಕಿಯಾಗಿ ಹೊತ್ತಿಕೊಂಡು
ಬಿಡುತ್ತದೆ.
ಆ ಬಯಕೆಯ ಬೆಂಕಿಯು ಮನುಷ್ಯನ
ಇಂದ್ರಿಯಗಳು, ಮನಸ್ಸು ಹಾಗೂ ಬುದ್ಧಿ
ಗಳಿಗೆ ಹತ್ತಿಕೊಂಡು ಅವನ ವಿವೇಕ
ವನ್ನು ಕಬಳಿಸಿ ಆ ವ್ಯಕ್ತಿಯನ್ನು
ಮರೆಸಿ ಬಿಡುತ್ತದೆ.
ಆದ್ದರಿಂದ ಮೊದಲು ನೀನು ಇಂದ್ರಿಯ
ಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು
ಮನುಷ್ಯನ ಜ್ಞಾನವು ತಿಳುವಳಿಕೆ ~~[illegible]~~
~~[illegible]~~ (ವಿಜ್ಞಾನ) ವನ್ನು ವಿನಾಶ
ಮಾಡುವ [illegible] ಧ್ವಂಸ ಮಾಡುವ
ಈ ಪಾಪಿಷ್ಠ ಬಯಕೆಯನ್ನು

[illegible]
[illegible]
[illegible]

ತೋ ಪೋಪ ಗಾಢ.

ಮೊದಲು ದೇಹಕ್ಕಿಂತ ಇಂದ್ರಿಯಗಳು ಉತ್ತಮ
ಎಂದು ಭಾವಿಸುತ್ತಾರೆ; ಬಳಿಕ
ಇಂದ್ರಿಯಗಳಿಂತ ಮನಸ್ಸು ಹೆಚ್ಚಿನದು
ಎಂದು ತಿಳಿಯುತ್ತಾರೆ; ಆಮೇಲೆ
ಮನಸ್ಸಿಗಿಂತಲೂ ಶ್ರೇಷ್ಠವಾದದ್ದು
ಬುದ್ಧಿ ಎಂದು ನಿಶ್ಚಯಿಸುತ್ತಾರೆ;
ನಂತರ ಬುದ್ಧಿಗಿಂತಲೂ ~~[illegible]~~
ಮೇಲಿರುವವನು ಆತನು
ಎಂಬ ತಿಳುವಳಿಕೆಯ ಕ್ರಮದಲ್ಲಿ
ಬುದ್ಧಿಗೂ ಆಚೆಗಿನ ಪರತತ್ತ್ವವನ್ನು
ಅರಿತುಕೊಂಡು ನಿನ್ನನ್ನು ನೀನೇ
ನಿಯಂತ್ರಿಸಿಕೊಂಡು ಬಯಕೆಯ
~~[illegible]~~ ರೂಪದ ಪಡೆಯುವ
~~[illegible]~~ ದುರ್ದಮ್ಯ / ಅಗಮ್ಯ
ಶತ್ರುವನ್ನು ನೀನು, ಅರ್ಜುನ.
~~[illegible]~~ ನಿಗ್ರಹಿಸುವ ಆ ಪ್ರಯತ್ನದಲ್ಲಿ
ಕುರುದಗಿಸು. ದೇಹದೊಳಗೇ ಅದನ್ನು
ಅಡಗಿಸಿಬಿಡು.



ಗೀತೆ

ಅಧ್ಯಾಯ 4

ಸಾರಾಂಶ

ಜ್ಞಾನ(ಕರ್ಮ ಸಂನ್ಯಾಸ) ಯೋಗದ ಉಪದೇಶದ
(ಜ್ಞಾನವು) ಸಂಪ್ರದಾಯವು ಬಹು ಪ್ರಾಚೀನವಾದುದು

ಪರಮಾತ್ಮನು (ಅವತಾರವೆತ್ತಿ)
ಹೇಗೆ ಬರುತ್ತಾನೆ, ಯಾವಾಗ ಬರುತ್ತಾನೆ
ಏಕೆ ಬರುತ್ತಾನೆ ಎಂಬ ವಿವರಗಳು
ಪರಮಾತ್ಮನ ಜನನದ ದಿವ್ಯತೆಯ ಪ್ರತಿಕ್ರಿಯೆಯು

ಭಗವಂತನನ್ನು ಯಾರು ಯಾಗ ಹೇಗೆ
ಪಡೆಯಬಹುದು.
ಭಗವಂತನ ಕಾರ್ಯವಿಧಾನ ಯಾವುದು; ಆ
ಕಾರ್ಯವಿಧಾನವನ್ನು ಅನುಸರಿಸುವುದರ ಲಾಭಗಳೇನು.

ಕರ್ಮದ ಗಹನತೆ.
ಯೋಗಿಗೆ ಕರ್ಮಬಂಧನ ಇಲ್ಲ.
ಯಜ್ಞದ ವಿವಿಧತೆ; ಯಜ್ಞದ ಶ್ರೇಷ್ಠತೆ
ಯಜ್ಞ ತತ್ವವನ್ನು ಅರಿಯುವ 3 ವಿಧಾನಗಳು
ಜ್ಞಾನಿಗೆ ಯಜ್ಞ ಮಾಡುವುದು, ಜ್ಞಾನಾಗ್ನಿಯ ಪಾವಿತ್ರ್ಯ
ಜ್ಞಾನವನ್ನು ಪಡೆಯುವ ಕ್ರಮ.
ಜ್ಞಾನ ಸಂಪಾದನೆಯ ಲಾಭಗಳು

—

ಅರ್ಜುನನ, ಎಂದರೆ ಆತ್ಮರೂಪದ ನಾನು
ಎಲ್ಲಕ್ಕೂ ಅಗೋಚರದ ಶಕ್ತಿ (ಶ್ರಮದ) ಅನುಭವದ,
ಜೀವಾತ್ಮರನ್ನು ನೋಡುವ ಸಾಮರ್ಥ್ಯ ನಿನಗೆ ಕೊಟ್ಟಿದೆ.
ಆ ಜ್ಞಾನವು ಸೂರ್ಯನಿಗೆ ಮನುವಿಗೆ ನಂತರ
ಇಕ್ಷ್ವಾಕುವಿಗೂ ನಂತರ ಕ್ರಮೇಣ
ರಾಜರ್ಷಿಗಳಿಗೆ ಹರಿದು ಬಂದಿದ್ದಿತು.
ಕಾಲಕ್ರಮೇಣ ಸ್ವಲ್ಪಕಾಲದಿಂದ ಈ ಯೋಗವು
ನಷ್ಟವಾಗಿದ್ದಿತು. ಅದನ್ನೇ ನಾನೀಗ ನಿನಗೆ
ಹೇಳುತ್ತಿದ್ದೇನೆ. ನೀನು ನನಗೆ ಆಪ್ತನಾಗಿರುವೆ
ನನ್ನ ಭಕ್ತನೂ ಆಗಿರುವೆ ಅಂತೆಯೇ ತುಂಬ
ರಹಸ್ಯವಾದ ಈ ಜ್ಞಾನವನ್ನು ನಿನಗೆ ತಿಳಿಸುವೆನು.

ಶ್ರೀಕೃಷ್ಣನು ಹೇಳಿದ್ದನ್ನು ಕೇಳಿ ಅರ್ಜುನನ
ನಿಗೆ ತುಂಬ ಆಶ್ಚರ್ಯವಾಯಿತು. ಸೂರ್ಯನಿಗೆ
[illegible] ಈ ಕೃಷ್ಣನು
ಇತ್ತೀಚಿನ ಕಾಲದವನು ಹುಟ್ಟಿ ತುಂಬ
ವರ್ಷಗಳು ಕಳೆದಿರುವ ಆ ಸೂರ್ಯನಿಗೆ
ಜ್ಞಾನವನ್ನು ಉಪದೇಶಿಸಿದನೆಂದರೆ ಅದನ್ನು
ನಂಬುವುದು ಹೇಗೆ? ತನ್ನ ಸಂಶಯವನ್ನು
ನೇರವಾಗಿ ಕೇಳಿಯೇ ಬಿಟ್ಟ

ಅರ್ಜುನನ ಪ್ರಶ್ನೆ :- ಅಲ್ಲಿಯ ಕೃಷ್ಣ ನೀನಂತೂ ಸ್ವಲ್ಪವೇ ~~[illegible]~~ ಬದುಕಿರುವ ಮನುಷ್ಯ : ಆ ಸೂರ್ಯನಾದರೋ ಲಕ್ಷಾಂತರ ವರ್ಷಗಳಿಂದಿರುವವನು. ಅವನು ನಿನಗೆ ಹಿರಿಯನಾದವನು ಹುಟ್ಟಿದನೆಂದರೆ ಆದರೆ ನೀನು ಅವನಿಗೆ ಬೋಧಿಸಿರುವುದು ಹೇಗೆ ಸಾಧ್ಯ ! ? ದಯವಿಟ್ಟು ~~[illegible]~~ ಇದನ್ನು ಸ್ಪಷ್ಟ ಪಡಿಸಿ ಹೇಳು

ಮೇಲ್ಕಂಡ ಪ್ರಶ್ನೆಗೆ ~~[illegible]~~ ನಸುನಕ್ಕು ಶ್ರೀ ಕೃಷ್ಣ ಉತ್ತರಿಸಿದ, - ನೀನೊಂದು ತಿಳಿಯದಂತೆ ನನಗಾಗಲಿ ನಿನಗಾಗಲಿ ಇದೊಂದೇ ಜನ್ಮವಲ್ಲ ನಡೆದಿರುವುದು. ಇದಕ್ಕೂ ಮುಂಚೆಯೂ ನಾವಿಬ್ಬರೂ ಜನ್ಮ ತಾಳಿದ್ದನ್ನು ನಾನು ಬಲ್ಲೆ ಆದರೆ ನಿನಗೆ ತಿಳಿದಿಲ್ಲ, ಅತ್ತ ಹೀಗೆ ಮೊದಲೇ ಹುಟ್ಟು ಬರುವುದಕ್ಕೆ ಎಲ್ಲರಿಗೂ ಇರುವುದೇ. ಆದರೆ ಇದರಲ್ಲಿ ನೀನು ಕಿಂಚಿತ್ತು ಭಿನ್ನ. ನನಗೆ ಹುಟ್ಟು ಎಂಬುದೂ ಸಾವು ಎಂಬುದೂ ಇಲ್ಲವಾದರೂ, ಇವೆಲ್ಲಕ್ಕೂ ನಾನೇ ಒಡೆಯ -

[illegible]

[illegible]

[illegible]
[illegible]
[illegible]

[illegible]
[illegible]

ನಾಗದೇವರು ನನ್ನದೇ ಆದ ಪ್ರಕೃತಿಯನ್ನು
ಆಶ್ರಯಿಸಿ, ನನ್ನದೇ ಆದೊಂದು
ಮಾಯೆಯಿಂದ ನಾನು ಸಂಭವಿಸುವೆನು.
ನು ~~ಅಂತೆ ನಾನು~~ ಯಾವಾಗ ಹುಟ್ಟಬೇಕೆಂಬುದನ್ನು ನಾನೇ
ನಿಶ್ಚಯ ಮಾಡುವೆನು. ಹಾಗೆ ನಾನು ಹುಟ್ಟ
ಬೇಕಾದುದು ಯಾವಾಗ ಎಂದು ಬಲ್ಲೆಯೇನು?
ಧರ್ಮಕ್ಕೂ ಅಧರ್ಮಕ್ಕೂ ಇಲ್ಲಿ ಸದಾ
ಸಂಘರ್ಷಣೆ ನಡೆಯುತ್ತಿರುವುದಷ್ಟೆ;
ಇದರಲ್ಲಿ ಏನಾದರೂ ಅಧರ್ಮವು ಮೇಲೆ ತಲೆಯ
ಎತ್ತಿತೋ ಧರ್ಮಕ್ಕೆ ನ್ಯಾಯಕ್ಕೆ
ಸಂಚಕಾರ ಬಂದುಬಿಟ್ಟರೆ ಆಗ ನಾನೇ
ಹುಟ್ಟಿಬರುವೆನು. ಹಾಗೆ ಕಾಲ ಕಾಲಕ್ಕೆ
ನಾನು ಹುಟ್ಟಿಬಂದು ಒಳ್ಳೆಯವರನ್ನು
ಬದುಕಿಸಿ ಕೆಟ್ಟವರುಗಳನ್ನು ತೊಡೆದು
ಹಾಕಿ ಧರ್ಮವನ್ನು ಉಳಿಸುತ್ತೇನೆ
ಹೀಗಿರುವ ನನ್ನ ಹುಟ್ಟು ಮಿಕ್ಕೆಯನ್ನು
ಕಾರ್ಯವು ದಿವ್ಯವಾದುದೆಂಬುದನ್ನು
ಯಾವಾತನು ಚೆನ್ನಾಗಿ ಅರಿತಿರುವನೋ
ಅವನು ಮರಣಾನಂತರ ಪುನರ್ಜನ್ಮ
ಪಡೆಯದೆ ನನ್ನಲ್ಲಿ ಸೇರಿಹೋಗುವನು

ಮುಕ್ತಿ ಸಾಧ್ಯವೆ ಬಗೆಂಬುವರು ಹಾಗೆ
ಕೃತಕೃತ್ಯರಾಗುತ್ತಾರೆಂದರೆ ಎಲ್ಲ
ವಿಧವಾದ ಉಪಕಾರ ಹಚ್ಚಿ [illegible]
[illegible] ಜಪಾಂಕೆ ಕಲ್ಪಿಸಿ ಸಕ್ಕರೆಯನ್ನು
ತೋರಿಸು, ಭಗವಂತ ನಿನ್ನಲ್ಲಿ
ಯಾವಾಗಲೂ ಆಸರೆ ಪಡೆದು,
ಪರಮಾತ್ಮ ಸನ್ನಿಧಿ ಸದಾ ಕಾಲವೂ
ನಿರಂತರ [illegible] ಬಗೆಯ ಜ್ಞಾನ
ತತ್ವಸ್ವರೂಪದ ಪವಿತ್ರ ಗಾಳಿ ಬೀಸುವ
ಕೆನೆಯ ಪರಮಾತ್ಮನ ಭಾವವನ್ನು
ಹೊಂದುವರು.

ಆದ್ದರಿಂದ, ನನ್ನನ್ನು ಯಾವಾಗಲೂ ಒಂದು ಬಗೆಯಲ್ಲಿ
ಮಾತ್ರ ಪೂಜಿಸಬೇಕು, ಯಾವಾಗಲೂ ಒಂದು
ಹೆಸರಿನಲ್ಲಿಯೇ ನನ್ನನ್ನು ಕರೆಯಬೇಕು
ಎಂದು ಹೇಳಿಲ್ಲ ಬೇಕು. ನನ್ನ ಭಕ್ತರು ಯಾವ
ಬಗೆಯಲ್ಲಿ ನನ್ನನ್ನು ಭಾವಿಸುವರೋ ಅದೇ
ಪ್ರಕಾರದಲ್ಲಿಯೇ ನಾನು ಅವರ ಬಳಿಗೆ ಬರುವೆನು
ನನ್ನನ್ನು ಕರೆಯಲು ಯಾರು ಯಾವ ಮಾರ್ಗ
ವನ್ನು ಬಳಸಿದರೂ ಅನುಸರಿಸಲಿ ಅವರು
ಬಿಟ್ಟು ನನ್ನ ಬಳಿಗೆ ಬರುವ ಮಾರ್ಗ

[illegible]
[illegible]

[illegible]
[illegible]
[illegible]
[illegible]

ಮಲ್ಲಿಂದಲೇ ಬರುತ್ತಿರುತ್ತಾರೆ, ಸಂಶಯವಿಲ್ಲ.
ಎಲ್ಲಿಂದ ಬೇಕಾದರೂ ಹೊರಟು ಬಹುದು, ನನ್ನನ್ನು
ಂದಲೆಂದು ಯಾವ ದಿಕ್ಕಿನಿಂದ ಬೇಕಾದರೂ ಅವರು
ಮುಂದು ಪ್ರೇರಿಸುತ್ತಿರಬಹುದು, ಅವರು
ನನ್ನ ಕಡೆಗೆ ಬರುತ್ತಾ, ನನ್ನನ್ನೇ ಹಿಂಬಾಲಿ
ಸುತ್ತಿರುತ್ತಾರೆ, ಅವರಿಗೆ ಎಲ್ಲಾ ಗೊತ್ತಿದೆ!

ತಮಗೆ ಇಷ್ಟವಾದ ದೇವರು ಒಬ್ಬನಲ್ಲ,
ತನ್ನ ಅಪೇಕ್ಷೆಯು ಕೈಗೂಡಲಿ ಎಂಬ
ಪ್ರಾರ್ಥನೆಯಿಂದ ಬಂಧುಗಳಿಂದ ಯಾರು
ಹೊರಟಿದರೂ, ಅವರ ಆ ಪ್ರಾರ್ಥನೆಯ
ತೀವ್ರತೆಗೆ ತಕ್ಕಂತೆ ಬೇಗನೆಯೋ ತಡವೋ
ಅವರ ಬಯಕೆಯು ಈಡೇರುವುದು.

ದೇವರನ್ನು ಬೇಡುವುದಕ್ಕಾಗಿ ಮನುಷ್ಯ
ರಲ್ಲಿ ಮುಖ್ಯವಾದ ಬಯಕೆಗಳು ಇರು
ವಂತೆಯೇ ಪ್ರಾಮಾಣಿಕವಾದ
ನ್ಯಾಯವಾದ ~~ಸಲ್ಲನ್ನು~~ ನ್ಯಾಯ ಒಪ್ಪದ
ಸ್ವಾರ್ಥದ ಬಯಕೆಗಳು ಮನುಷ್ಯರ
ಅಂತರಂಗದಲ್ಲಿ ಇವೆ. ಅವುಗಳ

(ಪ್ರವೃತ್ತಿ)
ಗುಣ ಅಥವಾ ಅಂಶಗಳ ದೆಸೆಯಿಂದ
ಪ್ರಕಟವಾಗುವ ಕೃತಿ (ಕರ್ಮ)
ಗಳಿಗೆ ತಕ್ಕಂತೆ ನಾಲ್ಕು ವರ್ಣಗಳನ್ನು
ಸಮಾಜದಲ್ಲಿ ನಾನು ಸೃಷ್ಟಿಸಿರುವೆ -
ನಾದರೂ ಇವುಗಳಿಂದ ನನಗೇನೂ
ಆಗಬೇಕಿಲ್ಲವಾದ್ದರಿಂದ ಇವುಗಳಲ್ಲಿ
ಪಾಲುದಾರಿಕೆಯಿಲ್ಲ) (ಕೈವಾಡವು ಇಲ್ಲ)
ಕೃತಿಗಾರನೆ ನಾನಲ್ಲ ಎಂದೂ
ಇದಕ್ಕೆ ಅತೀತನಾಗಿ ನಾನು ಅವಿನಾಶಿ
ಎಂದೂ ತಿಳಿ.
ಬದ್ಧನಿಷ್ಕಾಮಕರ್ಮಿಯಾಗಿ ನಾನು ಯಾವುದನ್ನೂ
ಮಾಡಿದ್ದರಿಂದ ಯಾವ ಕರ್ಮ (ಫಲ)
ಗಳೂ ನನಗೆ ಅಂಟುವು ; ಈ ತತ್ವ
ವನ್ನು ಯಾರು ಅರಿಯುತ್ತಾರೆಯೋ
ಅವರೂ ಇನ್ನು ಯಾವ ಕರ್ಮದ
ಬಂಧನಕ್ಕೂ ಒಳಪಡುವುದಿಲ್ಲ
ಅಂತಹ ವಿವೇಕದಿಂದ ಅವರು (ಮುಕ್ತಿ)
(ಮೋಕ್ಷ) ಹೊಂದತಕ್ಕಂತಹ ಕರ್ಮ
ಗಳನ್ನು ಈ ಹಿಂದೆ ಹಲವಾರು ಮಂದಿ
ಮಾಡಿರುವರು ; ನೀನೂ ಅವರಂತೆ

ಬಗೆಂತಲ್ಲಿ ಆ ಶ್ರೇಷ್ಠವಾದ ಕರ್ಮವನ್ನು ಅವಲಂಬಿಸಿ ಚಿತ್ತನನ್ನಾಗಿ ಮಾಡಿ ಕೃತ ಕೃತ್ಯನಾಗು.
ಎಡೆಬಿಡದೆ ನನ್ನನ್ನು ಅವಲಂಬಿಸುವ ಈ ಕರ್ಮಗಳನ್ನು ಪ್ರೀತಿಯಿಂದ ಮಾಡುವುದು ವಿಹಿತ/ ಯುಕ್ತ, ಅನ್ಯ ಮಾಡುವುದು ನಿಷಿದ್ಧ (ಅಕರ್ಮ) ಎಂದು ವಿವೇಚಿಸಿ ನೋಡುವಲ್ಲಿ ವಿದ್ವಾಂಸರು ಗೊಂದಲ (ಮೋಹ)ಕ್ಕೆ ಒಳಗಾಗುವರು.
ಆದ್ದರಿಂದ ನಿನ್ನ ಹಿತದೃಷ್ಟಿಯಿಂದ ಕರ್ಮ (ರಹಸ್ಯ)ವನ್ನು ಕುರಿತು ಹೇಳುವೆನು; ಅದನ್ನು ಸರಿಯಾಗಿ ತಿಳಿಯುವುದರಿಂದ ನೀನು ಅಶುಭ ಕಾರಿ ಪರಿಣಾಮಗಳಿಂದ (ಹಾನಿಕಾರಕ ಪಿಡುಗುಗಳಿಂದ) ಮುಕ್ತನಾಗುವಿ.
ಕರ್ಮ (ಕೆಲಸ ಮಾಡುವುದರ ಮೂಲಕವಾಗಿ ಫಲ ಭೋಗಿಸಬೇಕಾಗಿ ಬರುವುದು), ವಿಕರ್ಮ (ಕರ್ತವ್ಯ ಲೋಪ ಮಾಡಿದ = ಕರ್ಮಚ್ಯುತಿಯ ದೋಷಕ್ಕೆ ತುತ್ತಾಗುವುದು) ಮತ್ತು ಅಕರ್ಮ (ಕರ್ಮ

ಮಾಧ್ಯಮವಾಗಬಲ್ಲ ಆ ಕರ್ಮಕ್ಷೇತ್ರಕ್ಕೆ
ಭಾಗಿಯಾಗಿರುವುದು) — ಈ ಮೂರರ
ತ್ರಿಪುಟೈಕ್ಯವನ್ನು ಸಾಧಿಸಲು ಬೇಕಾದ
ಸಕ್ರಿಯದಕ್ಕೆ ಕರ್ಮ (ಹಾಗೆ ಇದರ
ಪರಿಣಾಮವಾಗಿ ಬರುವ ಫಲ) ದ
ಗತಿಯು ತುಂಬ ಗಹನವಾಗಿದೆ.
ಯಜಮಾನನು ಕೆಲಸವನ್ನು ಮಾಡುತ್ತಲೇ
ಆ ಕೆಲಸ ಮಾಡಿದ (ಕರ್ಮಕ್ಷೇತ್ರಕ್ಕೆ
ಸಂಬಂಧಿಸಿದ) ಪ್ರಾಮಾಣ್ಯವನ್ನು
ಕೆಲಸದ ಆಗುಹೋಗುವಿಕೆಗೆ ಸಲ್ಲಿಕ್ಕೆ
ಬಂದಿದ್ದಾಗಲೂ ಆ ಕೆಲಸವನ್ನು
ಶ್ರದ್ಧೆ (= ಆಸಕ್ತಿ) ಯಿಂದ
ಮಾಡುವ ಚಾತುರ್ಯವನ್ನು ಕರಗತ
ಮಾಡಿಕೊಂಡಿದ್ದಾನೆಂದಾಗ ಅವನು
ಮಾತ್ರವೇ ಕರ್ಮದ ಸಾರ್ಥಕ
ತೆಯನ್ನು ಹೊಂದಿದ್ದಾನೆ ಎಂದರ್ಥ

ಯಜಮಾನನು ಮಾಡುವ ಎಲ್ಲಾ
ಉದ್ಯೋಗ (= ಕೆಲಸ) ಗಳು
(ತೋರುವ ಎಲ್ಲಾ ಪ್ರವೃತ್ತಿಗಳು)



ಬಯಕೆ ಎಂದಾಗಲೀ ಆತಂಕ ಎಂದಾಗಲೀ
ಕಾಣದಿರದೆ ಪರಿಶುದ್ಧವಾಗಿರುತ್ತ, ಪೆರ್ಲೀ
ಆತ್ಮನ ಚಿಂತನೆಗಳಲ್ಲಿ)

ವಿವೇಕವೆಂಬ ಪುಟಾಣಿ ಒಳಗಾಗಿ
ಪವಿತ್ರವಾಗಿರುವ ದರ್ಪಣದ, ಆತ್ಮನನ್ನು
ತ್ರಿಗುಣಾತೀತ (ವಿವೇಕಿ) ಎಂದು
ಬಲ್ಲವರು ಕರೆಯುವರು. ತಾನು ಮಾಡುವ
ಯಾವುದೇ ಕೆಲಸಕ್ಕೆ ಫಲಾಗಿ ಮನಸನ್ನು
ಭಾವಿಸದೆ, (ಕೆಲಸಗಳ ಆಸಕ್ತಿಯನ್ನು -
ತ್ಯಜಿಸಿ ಬಿಡದೆ), ಸದಾ ತೃಪ್ತಿಯ
ಭಾವದಿಂದಿರುವ ಯಾರನ್ನೂ
(ಯಾವುದನ್ನೂ) ಅವಲಂಬಿಸದೆ
ಇರತಕ್ಕಂತಹ ಮನುಷ್ಯನು
ಯಾವ ಕೆಲಸದಲ್ಲಿ ತೊಡಗಿರಲಿ
ಆತನು ಏನನ್ನೂ ಮಾಡಿ (ಅ /)ಯಾವ
ಕೆಲಸವನ್ನು ಮಾಡುತ್ತಿರುವುದಿಲ್ಲ.
ಹಾಗೆ ಚಿಂತೆಯನ್ನು (ಆತಂಕವನ್ನು)
ನೀಗಿ, ಸಂಯಮ ಚಿತ್ತನಾಗಿ
ಯಾವ ವಿಧವಾದ ಸ್ವೀಕಾರಕ್ಕೂ

ಒಬ್ಬನಾಗದೆ ಕೇವಲ ಶಾರೀರಿಕವಾಗಿ
ಕೆಲಸ ಮಾಡುತ್ತಿರುವವನಿಗೆ ಯಾವ
ಕೆಲ(ಸವೂ) ಸಿಗಲಾರದು.
ಅವನಿಗೆ ತನ್ನ ಕೆಲಸದಿಂದ ದೊರೆತ
ಲಾಭದಿಂದಲೇ ತೃಪ್ತಿ, ಯಾವನಿಗೆ
ಯಾವ ವಿಧವಾದ ದ್ವಂದ್ವ (ಇಬ್ಬಂದಿ
ತನ) ವಾಗಲೀ ಅಸೂಯೆ ಮೇಲಾಟ
ಮಾತ್ಸರ್ಯ ವಾಗಲೀ ಇಲ್ಲವೋ
ಕೆಲಸವು ಈ ಲೋಕದವರು ವಿಧಿಸಲ
ಪಾದರೂ ಅವನ ಮನಸ್ಸಿನ
ಸಮಾಧಾನವು ಹಾಳಾಗುವುದಿಲ್ಲವೋ
ಅವನು (ಮನಸ್ಸು) ಮಾಡಿದರೂ
ಕಷ್ಟಪಡಬೇಕಿಲ್ಲ.

ಎಲ್ಲ ವಿಧವಾದ ಸಂಗ (ಅಂಟಿಕೊಳ್ಳುವ
ಗುಣ) ವನ್ನು ವರ್ಜಿಸಿ, ಸ್ವತಂತ್ರ
ನಾಗಿ, ವಿವೇಕದಲ್ಲಿಯೇ ಮನಸ್ಸ
ನೆಲೆಸಿದ ಚಿತ್ತವೃತ್ತಿಯವನಾಗಿ
ಯಜ್ಞಕ್ಕಾಗಿ ಮಾತ್ರ ಕರ್ಮ
ಪ್ರವೃತ್ತನಾಗಿರುವವನ ಕರ್ಮಸಂಪೂ

ಅತ್ಯಂತಿಕವಾಗಿ ಎಲ್ಲರನ್ನೂ ಗಮನಿಸುತ್ತದೆ.

ಎಚ್ಚರಗೊಂಡಾಗ ನಾವು ಮಲಗಿದ್ದ
ಸಮಯದಲ್ಲಿ ಸುಖವಾಗಿ ಎಚ್ಚರಂತೆ
ನಿರಂಬಳ್ಳತೆ ಸಿದ್ಧಿಯಲ್ಲಿ
ಅದನ್ನೇ ನಾವು ದಿನದ ಕಾಲದ
ಸಹಜ ಸಮಾಧಿ ಸ್ಥಿತಿ ಎಂದು
ಗುರುತಿಸಿದ್ದಾರೆ. ಆ ನಿರಂಬಳ್ಳತೆ
ಯು ನಿರಂತರವಾಗಿರುವ ದೇ
ಯು ಪ್ರಜ್ಞೆ.
ಪ್ರಜ್ಞೆಯ ಸ್ವರೂಪ ತತ್ವವಾದ
ಆ ಪ್ರಜ್ಞೆ ಶುದ್ಧ ಪ್ರಜ್ಞೆ (ಅರಿವು)
ನಾವ ಪ್ರಜ್ಞೆ ಇನ್ನೊಂದು
ಎನಿಸಿಕೊಳ್ಳ ವಾದಲ್ಲಿ ಪ್ರಜ್ಞೆ
ಯನ್ನು ಸ್ಪಷ್ಟವಾಗಿ ತಿಳಿದರೆ
ಅದು ಪ್ರಜ್ಞೆಗೆ ತಾನೆ ತಿಳಿದಿರಬೇಕು.


[illegible]

ಕೆಲ ಯೋಗಿಗಳು ದ್ವೈತವಾದ
ಯಜ್ಞದ ಉಪಾಸನೆಯಲ್ಲಿ ತೊಡಗಿ
ರುವರೆ — ~~ಮತ್ತೆ ಕೆಲವರು~~ ಇವರು
ದೇವತೆಗಳಿಗಾಗಿ ಯಜ್ಞವನ್ನು ಮಾಡು
ವವರು. ಮತ್ತೆ ಕೆಲವರು (—
ಇವರು ಜ್ಞಾನಿಗಳು) ಬ್ರಹ್ಮದಲ್ಲಿ
ಆತ್ಮ ಜ್ಞಾನದ ಯಜ್ಞ ಸಮರ್ಪಣೆ
ಮಾಡುತ್ತಾರೆ. (ಅಥವಾ ಬ್ರಹ್ಮ
ರೂಪದಿಂದ ಆತ್ಮನನ್ನು ನೋಡುತ್ತಾರೆ)
ಕೆಲವರು ಕಣ್ಣು, ಕಿವಿ ಮುಂತಾದ
ಇಂದ್ರಿಯಗಳನ್ನು ಸಂಯಮದ
ಅಗ್ನಿಯಲ್ಲಿ ಹೋಮ ಮಾಡುವವರು
(ಹೋಮ ಮಾಡುವವರು)
ಕೆಲವರು ಆ ಇಂದ್ರಿಯಗಳಿಗೆ
ವಿಷಯಗಳಾಗಿರುವ ದೃಶ್ಯ
ಶಬ್ದ — ಇವುಗಳನ್ನ ತಮ್ಮ
ಕಣ್ಣು, ಕಿವಿ ಮುಂತಾದ
ಇಂದ್ರಿಯಗಳಲ್ಲಿ ಅರ್ಪಿಸುತ್ತಿರು
ವರು (ಹೋಮ ಮಾಡುವವರು)

ರತ್ನಕ್ಕ ಮಾ. ಡಿ. ವಿ ವಠಲ್ಲ ಚಿಗರಿ [illegible]

ಕೆಲವರು ತಮ್ಮ ಎಲ್ಲ ಇಂದ್ರಿಯ ಕ್ರಿಯೆ
ಗಳನ್ನು ತಮ್ಮ ಪ್ರಾಣ ಕ್ರಿಯೆಗಳನ್ನು
ತಮ್ಮ ಜ್ಞಾನ ದೀಪ್ತವಾದ
ಆತ್ಮ ಸಂಯಮ ಯೋಗ (ಮನಸ್ಸು
ಅಗ್ನಿ) ಯಲ್ಲಿ ಸಮರ್ಪಿಸುವರು

ಇಂತು ದೃಷ್ಟಿಯಲ್ಲಿ ಒಂದೇ ದಿವಸ
ಸಮರ್ಪಿಸಿ ಎಲ್ಲಾ ಸಂಗಗಳನ್ನು ಬಿಟ್ಟ
ಯಜ್ಞ (ಮನಸ್ಸು) ಕ್ರಿಯೆ. ಆ ಬಗೆ
ಯಲ್ಲಿ ಯಜ್ಞ ಮಾಡುತ್ತಿರುವವರಲ್ಲಿ
ಹಲವು ಇದ್ದರು.
ಕೆಲವರು ದ್ರವ್ಯ ಯಜ್ಞ ಮಾಡುವವರು
ತಮ್ಮ ಗಳಿಸಿದ ಧನವ ಅರ್ಪಿಸಿ ಯಜ್ಞ ಮಾಡುವುದರಿಂದ ಸ್ವರ್ಗ
ಮುಂತಾದಲ್ಲಿ ಉನ್ನತ ಜನ್ಮ ಪ್ರಾಪ್ತಿಯಾಗುವುದು.
ಕೆಲವರು ತಪೋ ಯಜ್ಞ ಮಾಡುವವರು
ದೇವರ ಜತೆಗೆ ತಮ್ಮ ಮನಸ್ಸು ಪ್ರಾಣ (ಅಂತಃಕರಣ) ಗಳನ್ನು
[illegible] ಮಾಡುವುದರಿಂದ ಸ್ವರ್ಗ ಅನುಭವಿಸುವರು [illegible]
ಕೆಲವರು ಯೋಗ ಯಜ್ಞದಲ್ಲಿ ನಿರತರು.
ದ್ರವ್ಯ ಸ್ಥೂಲ ಶರೀರ [illegible] [illegible] ತ್ಯಾಗ
[illegible] [illegible] ಸಮರ್ಪಿಸುವುದರಿಂದ [illegible]
[illegible] ಜ್ಞಾನ ದೊರಕುವುದು



ದೃಢವಾದ ವ್ರತಧಾರಿಗಳಾದ
ಯತಿಗಳೆಂಬುವರಲ್ಲಿ ಎರಡು
ವಿಧ -
ಆ ಪೈಕಿ ಸ್ವಾಧ್ಯಾಯ ಯಜ್ಞ ಮಾಡು
ವವರು

ಅವರಲ್ಲಿ ಇನ್ನೊಂದು ಬಗೆಯವರಾದ
ಜ್ಞಾನ ಯಜ್ಞದಲ್ಲಿ ನಿರತರಾಗುವವರು

ಸ್ವದೇಹದಲ್ಲಿಯೇ ಯೋಗತಂತ್ರದಿಂದ
ಮನಸ್ಸು ಅನುಸಂಧಾನ ಮಾಡಿ
ಕೊಂಡಿರುವವರ ಪೈಕಿ ಒಂದು
ಬಗೆಯವರು ಅಪಾನವಾಯುವಿನಲ್ಲಿ
ಪ್ರಾಣವಾಯುವನ್ನು ಹೋಮಿಸುವರು
ಮತ್ತೊಂದು ಬಗೆಯವರು ಪ್ರಾಣವಾಯುವಿನಲ್ಲಿ
ಅಪಾನವಾಯುವನ್ನು ಹೋಮಿಸುವರು.

ಮೂರನೆಯ ಬಗೆಯವರು ಪ್ರಾಣ ಮತ್ತು
ಅಪಾನ ವಾಯುಗಳಿಗೆ ಒಟ್ಟು ಹಾಕಿ
ಊಧ್ವ೯ ಗತಿಯ ಪ್ರಾಣಾಯಾಮ ಮಾಡು
ತ್ತಿರುವವರು.
ಮತ್ತೊಂದು ಬಗೆಯವರು ಇದ್ದಾರೆ. ಇವರು
ಆಹಾರ ಸೇವನೆಯನ್ನು ಬಹಳ ಮಟ್ಟಿಗೆ ನಿಲ್ಲಿಸಿ
ಉಸಿರಾಡುವುದರಿಂದಲೇ ತಮ್ಮ ಪ್ರಾಣ
ಧಾರಣೆ ಮಾಡಿಕೊಂಡು ಬದುಕುತ್ತಾರೆ (ಇವರಿಗೆ
ಉಸಿರಿನ ಅಪೇಕ್ಷೆ ಇಲ್ಲವೇ ಇಲ್ಲ ಎನ್ನಬಹುದು)
ಮೇಲ್ಕಂಡಂತೆ ವಿವಿಧ ರೀತಿಯ
ಯಜ್ಞಗಳನ್ನು ಬಲ್ಲವರೆಲ್ಲರೂ ಆ
ಯಜ್ಞ ಕ್ರಿಯೆಯಿಂದ ಕಲ್ಮಶವೆಲ್ಲವನ್ನು
ತೊಳೆದುಕೊಂಡು ಪರಿಶುದ್ಧರಾಗುವರು.
ಯಜ್ಞ ಮಾಡಿ ಉಳಿದ ದಿವ್ಯಾನ್ನವ
ಉಂಡು ಸಂತೃಪ್ತರಾಗುವ ಇವರು
ಶಾಶ್ವತವಾದ ಬ್ರಹ್ಮವನ್ನು ಪಡೆಯುವರು.
ಇವರಿಗೆ ವ್ಯತಿರಿಕ್ತವಾಗಿ ಸ್ವಾರ್ಥಪರ
ವಾದ ಯಾವುದೇ ಯಜ್ಞ ಬುದ್ಧಿಯಿಲ್ಲವೋ
ಅವರಿಗೆ ಇಲ್ಲಿಯೂ ಆ ಒಳ್ಳೆಯ
ಗತಿ ಪ್ರಾಪ್ತವಾಗದು ಎಂದ ಮೇಲೆ


[illegible]

ಅಸಾಂತರದಲ್ಲಿಯೇ ಶಾಸ್ತ್ರವು
ಹೇಳಿ ತಾನೇ ಬರುತ್ತದೆಯೇ ?
ಈಗ ತಿಳಿಸಿದಂತೆ ಕರ್ಮವು ಬಂಧನದಲ್ಲಿ
ಯಜ್ಞವು ಬ್ರಹ್ಮನ ಮುಖದಿಂದ
ಬಂದಿದೆ. ಅದರಿಂದ ಮುಖ್ಯವಾಗಿ
ಜೀವನಕ್ಕೆ ಯಾವುದು (ನಿಷ್ಕಾಮ ಕರ್ಮ
ಮಾಡುವುದು) ಎಂದು ತಿಳಿದರೆ
ನಿನಗೆ ಮುಕ್ತಿಯು ಸಿದ್ಧಿಸುವುದು.

ಕರ್ಮಕ್ಕಿಂತಲೂ ಜ್ಞಾನವು ಶ್ರೇಷ್ಠವೆಂದು
(2ನೇ ಅಧ್ಯಾಯದಲ್ಲಿ) ತಿಳಿಸಿದ
ಅಂತಾದ ಮೇಲೆಂದರೆ ಯಜ್ಞವು
ಕೇವಲ ದುಷ್ಕರವಾಗಿ ಮಾಡಿ
ಅದನ್ನು ಜ್ಞಾನ ನಿಷ್ಠನಾಗಿ ಮಾಡು
ವುದರಿಂದ ಅಂತಹ ಯಜ್ಞವು ಶ್ರೇಷ್ಠ
ವಾಗುತ್ತದೆ (ಎಂದು ಶಂಕರರು ಆಗ
ತಿಳಿಸಿದರು ನಿನಗೆ ಅದೇ ಆಗುತ್ತದೆ
ಎಂದು ಹೇಳುವ ಕರ್ಮಕ್ಕಿಂತ ಜ್ಞಾನ
ಶ್ರೇಷ್ಠವಾದುದು ಎಂದು ತಿಳಿಸಿದ್ದಾರೆ
ಆದರೆ, ಅಂತಹ ಕರ್ಮವೆಂದು

ಈ ನನ್ನ ಕವನವು ಪ್ರ[illegible]
[illegible] ಎಂಬ ಕವನವನ್ನು ಬರೆ
[illegible] ಎಂದು [illegible] [illegible]

ಅಂಟಂದು ಒಂದನ್ನು ತತ್ತ ಗಳಲ್ಲಿ
[illegible]
[illegible]
[illegible]
[illegible]
[illegible] . [illegible]
[illegible]
[illegible] ?
ಅಂತಹ – [illegible]
[illegible]
[illegible] ?
ಅಂತಹ ತತ್ತ್ವ [illegible]
[illegible] .
[illegible]
[illegible]
([illegible]
[illegible]) [illegible]
[illegible]
[illegible]
[illegible]



ಉಪದೇಶಿಸುವರು.
ಅಂತಹ ಜ್ಞಾನ ಬೋಧನೆಯು ಒಮ್ಮೆ
ನಿನಗಾಯಿತೆಂದರೆ ಮತ್ತೆ ಈಗ
ನಿನ್ನನ್ನಾವರಿಸಿರುವ ಮೋಹದಂತ
(ಮೋಹ ಮರೆಯುವಿಕೆಯು ಅಥವಾ
ಮರುಳುತನವು) ನಿನಗೆ
ತಪ್ಪದು.
ಆ ಜ್ಞಾನ ಪ್ರಾಪ್ತಿಯಿಂದ ಈಗ
ಜೀವಿಗಳೆಲ್ಲವನ್ನೂ ನನ್ನ
ಸ್ವರೂಪದಲ್ಲಿರುವೆಯೋ ಅದಾಗಲೀ
ನಿನಗೂ ನಿನ್ನೊಳಗೇ ಸಮಸ್ತ
ಜಗತ್ತನ್ನು ಸಂಪೂರ್ಣವಾಗಿ
ಕಂಡುಕೊಳ್ಳುವ ಮಾರ್ಗವು
ಸಂಭವಿಸುವುದು

17.2.87

